ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 36
೬ ಜುಲೈ ೧೯೫೮
★
ಪುಟ ೧೦ ಬೆಲೆ: ೧೩ ನಯೇ ಪೈಸೆ

★

ಕನ್ನಡಿಗರಿಗೆ ಆಗಿರುವ ಅನ್ಯಾಯಕ್ಕೆ ಸರಕಾರದ ದೌರ್ಬಲ್ಯವೇ ಕಾರಣ

ಮೀಸಲಾಗಿದ್ದ ಹಣ ಉಪಯೋಗಿಸಲು ಸರಕಾರದ ಅಸಮರ್ಥತೆಯಿಂದ ಯೋಜನೆಯಲ್ಲಿ ತೀವ್ರ ಖೋತಾ

ಎನ್. ಎಲ್. ಉಪಾಧ್ಯಾಯ

"ಮೈಸೂರಿನ ಅಭಿವೃದ್ಧಿಗೆ ಸಾಕಷ್ಟು ಆರ್ಥಿಕ ನೆರವನ್ನು ಕೇಂದ್ರದಿಂದ ಪಡೆಯಲು ಸರಕಾರಕ್ಕೆ ಸಾಧ್ಯವಾಗಲಿಲ್ಲ. ಯೋಜನೆಗೆ ಮೀಸಲಾಗಿಟ್ಟ ಹಣವನ್ನು ಸಹ ಪೂರ್ತಿಯಾಗಿ ವಿನಿಯೋಗಿಸಲೂ ಪ್ರಾಂತ್ಯ ಸರಕಾರ ಶಕ್ತವಾಗಿಲ್ಲ"ವೆಂದು ಕಮ್ಯೂನಿಸ್ಟ್ ಪಾರ್ಟಿಯು ಕರ್ನಾಟಕ ಪ್ರಾಂತ ಸಮಿತಿಯು ಹೋದ ತಿಂಗಳು ಮಾಡಿದ ತೀರ್ಮಾನದಲ್ಲಿ ತಿಳಿಸಿರುತ್ತದೆ. ಗಂಭೀರವಾದ ಈ ಆರೋಪಗಳಿಗೆ ಈಗ ಪ್ರಕಟವಾಗಿರುವ ಅಂಕಿಅಂಶಗಳು ಇನ್ನೂ ಪುಷ್ಟೀಕರಿಸಿವೆ.

ನಮ್ಮ ರಾಜ್ಯ ಇತರ ರಾಜ್ಯಗಳಿಗಿಂತ ಆರ್ಥಿಕ ಅಭಿವೃದ್ಧಿಯಲ್ಲಿ ಹಿಂದುಳಿದಿರುವುದು ಎಲ್ಲರಿಗೂ ತಿಳಿದ ವಿಷಯ. ಪ್ರಾಂತ್ಯದ ಕೆಲವು ಪ್ರದೇಶಗಳಂತೂ ತೀರಾ ಹಿಂದುಳಿದಿದ್ದು ಏಕೀಕರಣವಾದ ಮೇಲಾದರೂ ಪ್ರಗತಿ ಹೊಂದುವುದೆಂಬ ಭರವಸೆ ಜನತೆಯಲ್ಲಿತ್ತು. ಆದರೆ ಇದು ಕೈಗೂಡುವ ಸೂಚನೆಗಳು ಮಾತ್ರ ಸಾಕಷ್ಟು ಕಂಡುಬರುವುದಿಲ್ಲ.

ಕನ್ನಡಿಗರಿಗೆ ಆಗಿರುವ ಅನ್ಯಾಯ !

ದ್ವಿತೀಯ ಪಂಚ ವಾರ್ಷಿಕ ಯೋಜನೆಯ ಮೂರನೇ ವರ್ಷಕ್ಕೆ ಸುಮಾರು ರೂ 40 ಕೋಟಿಯ ಅಂದಾಜನ್ನು ಮಾಡಿ ರಾಜ್ಯ ಸರಕಾರ ಕೇಂದ್ರ ಸರಕಾರಕ್ಕೂ, ಯೋಜನಾ ಸಮಿತಿಗೂ ಕಳಿಸಿತ್ತೆಂದು ವರದಿಯಾಗಿತ್ತು. ಅಷ್ಟು ಹಣವನ್ನೊದಗಿಸಲು ಸಾಧ್ಯವಿಲ್ಲೆಂದು ಹಿಂದಿನ ಎರಡು ವರ್ಷಗಳಲ್ಲಿ ಮೀಸಲಾಗಿಟ್ಟ ಹಣವನ್ನು ಸಂಪೂರ್ಣವಾಗಿ ಉಪಯೋಗಿಸಲಿಲ್ಲವೆಂಬ ಕಾರಣದಿಂದಲೂ ಕೇಂದ್ರಸರಕಾರ ಯೋಜನೆಯ 3ನೇ ವರ್ಷಕ್ಕೆ ಸುಮಾರು 25 ಕೋಟಿ ರೂ.ಗಳನ್ನಷ್ಟೇ ಕೊಡಲೊಪ್ಪಿತು. ಇದರಿಂದಾಗಿ ಯೋಜನೆಯಲ್ಲಿ ತೀವ್ರ ಖೋತಾ ಆಗಿದ್ದಲ್ಲದೆ ಕನ್ನಡನಾಡಿನ ಜನತೆಗೆ ಬಹಳ ಅನ್ಯಾಯವಾಗಿರುತ್ತದೆ. ಈ ಈ ಪರಿಸ್ಥಿತಿಗೆ ಆಳುವ ಪಕ್ಷವಾದ ಕಾಂಗ್ರೆಸ್ಸಿನೊಳಗಿನ ಜಗಳ ಮತ್ತು ಸರಕಾರದ ದುರ್ಬಲತೆಯೇ ಮುಖ್ಯ ಕಾರಣವೆಂಬುದನ್ನು ಒತ್ತಿ ಹೇಳಬೇಕಾಗಿಲ್ಲ.

ದ್ವಿತೀಯ ಪಂಚ ವಾರ್ಷಿಕ ಯೋಜನೆಯಲ್ಲಿ ಮೈಸೂರು ರಾಜ್ಯಕ್ಕೆ 143 ಕೋಟಿ ರೂಪಾಯಿಗಳನ್ನು ಮೀಸಲು ಮಾಡಲಾಗಿದೆ. ಆದರೆ ಕಳೆದ ಎರಡೂವರೆ ವರ್ಷಗಳಲ್ಲಿ ಶೇಕಡ 25ರಷ್ಟು ಮಾತ್ರ ಕಾರ್ಯಗತವಾಗಿದೆ ಎಂದು ಉಪಮಂತ್ರಿ ಶ್ರೀ ಲಿಂಗಾರೆಡ್ಡಿಯವರು ತಾ.26-6-58 ರಂದು ಬಹಿರಂಗಪಡಿಸಿದ್ದಾರೆ. ಕಳೆದೆರಡು ವರ್ಷಗಳಿಗೆ 50 ಕೋಟಿ ರೂಪಾಯಿಗಳನ್ನು ಮೀಸಲು ಮಾಡಿದ್ದರೂ ಸುಮಾರು 35 ಕೋಟಿ ರೂಪಾಯಿ ಮಾತ್ರ ವೆಚ್ಚವಾಗಿದೆ ಎಂದು ತಿಳಿಸಿದ್ದಾರೆ. 1957-58ನೆಯ ವರ್ಷಕ್ಕೆ ತಯಾರಿಸಿದ ಕಾರ್ಯಕ್ರಮಕ್ಕೆ 29 ಕೋಟಿ ರೂಪಾಯಿಗಳ ಅಂದಾಜು ಮಾಡಲಾಯಿತು. ಆದಾಗ್ಯೂ ಬಡ್ಜೆಟ್ಟನಲ್ಲಿ 27 ಕೋಟಿ ರೂಪಾಯಿಗಳಷ್ಟನ್ನೆ ಒದಗಿಸಲಾಯಿತು" ಎಂದೂ ಅವರೇ ತಿಳಿಸಿದ್ದಾರೆ. 1958-59 ರ ಸಾಲಿಗೆ 25 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆಯಂತೆ. ವರ್ಷ ವರ್ಷ ಯೋಜನೆಯ ಪ್ರಮಾಣ ಹೆಚ್ಚಾಗುವುದರ ಬದಲು ನಮ್ಮ ರಾಜ್ಯದಲ್ಲಿ ಅದು ಕಡಿಮೆಯಾಗುತ್ತಿರುವುದೊಂದು ನಮ್ಮ ವೈಶಿಷ್ಟ್ಯವೆಂದೇ ಹೇಳಬೇಕು! ಪರಿಸ್ಥಿತಿ ಹೀಗಿದ್ದು ಇನ್ನುಳಿದ ಎರಡೂವರೆ ವರ್ಷಗಳಲ್ಲಿ ಯೋಜನೆಯನ್ನು ಎಷ್ಟರಮಟ್ಟಿಗೆ ಪೂರಯಿಸಬಹುದೆಂದು ವಾಚಕರೇ ಊಹಿಸಬಹುದು

ಹಣ ವೆಚ್ಚವಾಗುತ್ತಿರುವುದು ಹೇಗೆ ?

ಈಹಣವಾದರೂ ಹೇಗೆ ವೆಚ್ಚವಾಗುತ್ತಿದೆಂಬುದನ್ನು ನಾವೇನೂ ವಿವರಿಸಬೇಕಾಗಿಲ್ಲ. ರಾಷ್ಟ್ರೀಯ ವಿಸ್ತರಣಾ ಕ್ಷೇತ್ರಗಳನ್ನೇ ತೆಗೆದುಕೊಂಡರೂ ಆ ಕ್ಷೇತ್ರಗಳಲ್ಲಿ ಹೆಚ್ಚಿನ ಹಣ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಸಂಬಳ, ಭತ್ತೆಗಳಿಗೆ ವಿನಿಯೋಗವಾಗುತ್ತಿದೆಯೇ ಹೊರತು ಊರಿನ ಬಡಜನತೆಗೆ ಸಾಕಷ್ಟು ಪ್ರತಿಫಲ ದೊರೆಯುತ್ತಿಲ್ಲ. ಇತರ ಕ್ಷೇತ್ರಗಳಲ್ಲೂ ಇದೇ ದೃಶ್ಯ ಕಂಡುಬರುತ್ತದೆ.

ಈಗಂತೂ ಯೋಜನೆಯು ಇನ್ನೂ ಹೆಚ್ಚಿನ ಬಿಕ್ಕಟ್ಟಿಗೆ ಸಿಲುಕಿಕೊಂಡಿದೆ. ಹಣದ ಕೊರತೆಯ ಕಾರಣದಿಂದ ಯೋಜನೆಯ ಪ್ರಮಾಣವನ್ನು ಖೋತಾ ಮಾಡಲಾಗಿದೆ. ಸಾರ್ವಜನಿಕ ಕ್ಷೇತ್ರದ ರೂ. 4,800 ಕೋಟಿಯನ್ನು ರೂ. 4,500ಕ್ಕೆ ಇಳಿಸಲಾಗಿದೆ. ಕಳೆದೆರಡು ವರ್ಷಗಳಲ್ಲಿ ಬೆಲೆಗಳು ಏರಿರುವುದರಿಂದ ಹಿಂದೆ ರೂ. 4,800 ಕೋಟಿ ವೆಚ್ಚವಾಗುವುದೆಂದು ಅಂದಾಜುಮಾಡಲಾಗಿದ್ದ ಯೋಜನೆಯನ್ನು ಈಗ ಕಾರ್ಯಗತಗೊಳಿಸಬೇಕಾದರೆ ಈಗಿನ ದರದ ಪ್ರಮಾಣದಲ್ಲಿ ಅದಕ್ಕೆ ರೂ. 5,500 ಕೋಟಿಯಾದರೂ ಬೇಕಾಗುತ್ತವೆ. ಆದರೆ ಕೇಂದ್ರ ಸರಕಾರವೇ ಯೋಜನೆಯ ಒಟ್ಟು ಪ್ರಮಾಣವನ್ನು 4,500 ಕೋಟಿ ರೂಪಾಯಿಗೆ ಇಳಿಸಿದ್ದರಿಂದ ಮೂಲ ಯೋಜನೆಯಲ್ಲಿ ಸುಮಾರು 1,000 ಕೋಟಿ ರೂಪಾಯಿಯ ಖೋತಾ ಆಗಿರುವುದನ್ನು ಗಮನಿಸುವುದಗತ್ಯ. ಈ ಪರಿಸ್ಥಿತಿಯಲ್ಲಿ ಮೈಸೂರು ರಾಜ್ಯದ ಯೋಜನೆಯಲ್ಲೂ ಬಹಳ ಗಂಭೀರವಾದ ಪರಿಣಾಮವಾಗಿರುತ್ತದೆ. ಇದರ ಕಹಿ ಅನುಭವವನ್ನು ನಮ್ಮ ಜನತೆ ಅನುಭವಿಸಬೇಕಾಗಿದೆ.

ನಮ್ಮ ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ ಉಪಮಂತ್ರಿ ಲಿಂಗಾರೆಡ್ಡಿಯವರು ಕೊಟ್ಟಿರುವ ಅಂಕಿ ಅಂಶಗಳು ಇನ್ನೂ ಕುತೂಹಲಕಾರಿಯಾಗಿವೆ. ದ್ವಿತೀಯ ಯೋಜನೆಯ ಅಂತ್ಯದೊಳಗೆ ನಮ್ಮಲ್ಲಿ 10,68,046 ಎಕ್ರೆ ಜಮೀನನ್ನು ದೊಡ್ಡ ಪ್ರಮಾಣದ ನೀರಾವರಿ ಯೋಜನೆಗಳಿಂದ ಉಳಿಮೆಗೆ ತರಬೇಕಾಗಿದ್ದರೂ ಇಷ್ಟರ ತನಕ ಬರೇ 1,90,568 ಎಕ್ರೆ ಮಾತ್ರ ಸಾಗುವಳಿಗೆ ಬಂದಿರುತ್ತದೆಂದು ಅವರು ಹೇಳಿದ್ದಾರೆ. ಅದರ ವಿವರಗಳನ್ನು ಕೆಳಗೆ ಕೊಟ್ಟಿದೆ:

ಯೋಜನೆಯ ಗುರಿಗಿಂತ ಇದು ತುಂಬಾ ಹಿಂದುಳಿದಿದ್ದು ಪರಿಸ್ಥಿತಿ ಚಿಂತಾಜನಕವಾಗಿದೆ. ತುಂಗಭದ್ರಾ ಪ್ರದೇಶದಲ್ಲಿ ನೀರಿನ ಸೌಕರ್ಯವಿದ್ದರೂ ಅದನ್ನು ಉಪಯೋಗಿಸಿ ಸಾಗುವಳಿ ಮಾಡಲು ಜನ ಮುಂದೆ ಬರುವುದಿಲ್ಲವೆಂದು ಅನೇಕಬಾರಿ ಹೇಳಿರುತ್ತದೆ. ಮತ್ತು ಜನರನ್ನು ಅಲ್ಲಿಗೆ ಆಕರ್ಷಿಸಲು ಪ್ರಯತ್ನಗಳನ್ನು ಮಾಡಿದ್ದರೂ ಸಾಕಷ್ಟು ಯಶಸ್ಸುಗಳಿಸಲಿಲ್ಲ.

ಪಕ್ಷದ ಪ್ರಶ್ನೆಯಲ್ಲ.

ಈ ಪರಿಸ್ಥಿತಿಗೆ ಸರಕಾರದ ಪ್ರತಿಗಾಮಿ ಧೋರಣೆಯೇ ಕಾರಣವೆಂದು ಕಮ್ಯೂನಿಸ್ಟ್ ಪಾರ್ಟಿ ಹೇಳಿದೆ. ಯೋಜನೆಯನ್ನು ಕಾರ್ಯಗತಗೊಳಿಸಲು ಸರಕಾರ ಇತರ ಪಕ್ಷಗಳ ಸಹಕಾರವನ್ನು ತೆಗೆದುಕೊಳ್ಳದಿರುವುದು ಮುಖ್ಯ ಕಾರಣಗಳಲ್ಲೊಂದಾಗಿದೆ. ನೀರಾವರಿ ಯೋಜನೆಗಳನ್ನು ಯಶಸ್ವಿಗೊಳಿಸಿ, ರೈತರು ಅದರ ಅನುಕೂಲ ಪಡೆಯುವಂತೆ ಮಾಡುವ ಕೆಲಸವನ್ನು ಪಾರ್ಟಿಯ ಪ್ರಶ್ನೆಯನ್ನಾಗಿ ಮಾಡದೆ ರಾಷ್ಟ್ರೀಯ ಸಮಸ್ಯೆಯೆಂದು ಪರಿಗಣಿಸಿ ಕಾಂಗ್ರೆಸ್ ಸರಕಾರ ವಿರೋಧ ಪಕ್ಷಗಳ ಸಹಕಾರವನ್ನು ತೆಗೆದುಕೊಳ್ಳುವುದಗ್ನತವೆಂದು ವಿಶ್ವವಿದ್ಯಾಲಯದ ಉಪ ಕುಲಪತಿಯಾದ ಡಾಕ್ಟರ್ ವಿ.ಕೆ.ಆರ್.ವಿ. ರಾವ್ ರವರು ಕೆಲವು ದಿವಸದ ಹಿಂದೆ ಸೂಚಿಸಿದ್ದಾರೆ.

(ಕೊನೇ ಪುಟ ನೋಡಿ)

	ಸಾಗುವಳಿಗೆ ಬಂದಿರುವುದು	ಸಾಗುವಳಿ ಯಾಗಬೇಕಾದ್ದು
ತುಂಗಾ ಅಣೆಕಟ್ಟು	16,316 ಎಕ್ರೆ	21,500 ಎಕ್ರೆ
ಭದ್ರಾ	6,000	2,34,200
ತುಂಗಾಭದ್ರಾ (ರಾಯಚೂರು ಭಾಗದಲ್ಲಿ)	27,964	5,80,000
ಬಳ್ಳಾರಿ ಭಾಗದಲ್ಲಿ	41,000	96,346
ನುಗು	5,941	20,000
ಘಟ ಪ್ರಭಾ	12,460	120,000

ಸಂಪಾದಕೀಯ

ಕೈಗಾರಿಕೆ ಆಡಳಿತೆಯಲ್ಲಿ ಕಾರ್ಮಿಕರಿಗೂ ಪಾಲು

ಬೆಂಗಳೂರಿನಲ್ಲಿರುವ ಕೇಂದ್ರ ಸರಕಾರದ ಉದ್ಯಮವಾದ ಹಿಂದೂಸ್ಥಾನ್ ಮೆಷಿನ್ ಟೂಲ್ಸ್ ಕಾರ್ಖಾನೆಯಲ್ಲಿ ಜೂನ್ 30ರಿಂದ ಕೆಲಸಗಾರರನ್ನು ಆಡಳಿತ ವಲ್ಲಿ ಭಾಗಿಯಾಗುವಂತೆ ಮಾಡುವ ಪ್ರಯೋಗವನ್ನು ಆರಂಭಿಸಲಾಗಿದೆ. ಕಾರ್ಖಾ ನೆಯ ಆಡಳಿತವನ್ನು ನಿರ್ವಹಿಸುವುದರಲ್ಲಿ ಮ್ಯಾನೇಜ್‌ಮೆಂಟ್ ಮತ್ತು ಕೆಲಸಗಾ ರರ ಸಮಸಾದ ಪ್ರಾತಿನಿಧ್ಯವುಳ್ಳ ಜಂಟಿ ಮ್ಯಾನೇಜ್‌ಮೆಂಟ್ ಕೌನ್ಸಿಲ್ ಅನ್ನು ಸ್ಥಾಪಿಸಲಾಗಿದೆ. ಪ್ರಭುತ್ವ ಕ್ಷೇತ್ರದಲ್ಲಿರುವ ಉದ್ಯಮದಲ್ಲಿ ಭಾರತದಲ್ಲಿ ಪ್ರಥಮ ಬಾರಿಗೆ ಈ ಪ್ರಯೋಗ ಆರಂಭವಾಗಿದೆ. ಅದು ಪರಿಣಾಮಕಾರಿಯಾಗಿ ಆಗಲಿ ಎಂಬುದೇ ನಮ್ಮ ಆಶಯ.

ಕೈಗಾರಿಕೆಯ ಅಭಿವೃದ್ಧಿಗೆ, ಉತ್ಪಾದನೆ ಹೆಚ್ಚಿಸುವುದಕ್ಕೆ, ಲಂಚ ಖುಷು ವತ್ತು, ದುರ್ವ್ಯಯ ಇವುಗಳನ್ನು ತೊಡೆದುಹಾಕಲು, ಕಾರ್ಖಾನೆಯ ಆಡಳಿತಗಾ ರರ ನಡುವೆ ಸಂಬಂಧವು ಉತ್ತಮಗೊಳ್ಳುವುದಕ್ಕೆ ನೇರವಾಗಿ ಉತ್ಪಾದನೆಯಲ್ಲಿ ತೊಡಗಿರುವ ಕೆಲಸಗಾರರಿಗೆ ಆಡಳಿತೆಯಲ್ಲಿ ಪ್ರಾತಿನಿಧ್ಯವಿರುವುದು ಸಹಾಯಕವಾ ಗುತ್ತದೆ. ಸಂತೃಪ್ತ ಕಾರ್ಮಿಕ ವರ್ಗ ಮತ್ತು ಕಾರ್ಮಿಕರು ಹಾಗೂ ಮ್ಯಾನೇಜ್ ಮೆಂಟುಗಳ ನಡುವೆ ಉತ್ತಮವಾದ ಸಂಬಂಧವಿಲ್ಲದಿದ್ದಲ್ಲಿ ಉತ್ಪಾದನೆಯ ಯೋಜ ನೆಯ ಗುರಿ ಸಾಧನೆಯಾಗುವುದು ಕಷ್ಟ. ಯೋಜನೆಯ ಗುರಿಯನ್ನು ಸಾಧಿಸಲು ಉದ್ಯಮಗಳಲ್ಲಿ ಕಾರ್ಮಿಕರಿಗೆ ಅವುಗಳ ಅಭಿವೃದ್ಧಿ ಮತ್ತು ಆಡಳಿತೆಯಲ್ಲಿ ಸಮ ಪಾಲು ದೊರೆಯುವುದು ಪರಿಣಾಮಕಾರಿಯಾಗುವುದು.

ಆದರೆ ಅದೇ ಸಮಯದಲ್ಲಿ ಆಡಳಿತದಲ್ಲಿ ಕಾರ್ಮಿಕರಿಗೂ ಪಾಲು ಎಂದಲ್ಲಿ ಅದು ಪ್ರಚಾರಕ್ಕೆ ಮಾತ್ರ ಆಗಬಾರದು. ಉತ್ಪಾದನೆಯನ್ನು ಅಧಿಕಗೊಳಿಸು ವುದು, ಉತ್ಪಾದನಾ ಕ್ರಮಗಳನ್ನು ಸುಧಾರಿಸುವುದು, ಮಿತವ್ಯಯ ಮೊದಲಾದ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳಿಗಷ್ಟೇ ಸೀಮಿತವಾದರೆ ಹೆಚ್ಚು ಪ್ರಯೋಜ ನವೂ ಆಗುವುದಿಲ್ಲ, ಜಂಟಿ ಆಡಳಿತ ನಿರ್ವಹಣೆಯೂ ಆಗುವುದಿಲ್ಲ. ಕೆಲಸ ಗಾರರ ಸೌಲಭ್ಯಗಳಿಗೂ, ಅವರ ನ್ಯಾಯವಾದ ಬೇಡಿಕೆಗಳ ಕಡೆಗೂ ಗಮನ ಕೊಟ್ಟು, ಕಾರ್ಖಾನೆಯ ಆಡಳಿತ ನಿರ್ವಹಣೆಯಲ್ಲಿ ನಿಜವಾಗಿ ಅವರಿಗೂ ಸಮಾನ ಪಾಲು ಇದೆ ಎಂಬುದನ್ನು ಮನದಟ್ಟಾಗಿಸುವಂತೆ ಮಾಡಬೇಕು. ಮೆಷಿನ್ ಟೂಲ್ಸ್ ಮ್ಯಾನೇಜ್‌ಮೆಂಟ್ ಕೌನ್ಸಿಲಿನ ಅಧಿಕಾರ ವ್ಯಾಪ್ತಿಯ ವಿವರ ಸಂಪೂರ್ಣವಾಗಿ ತಿಳಿದುಬಂದಿಲ್ಲ. ಆದರೂ ಈ ಪ್ರಯೋಗ ಆರಂಭವಾಗಿರುವುದರಿಂದ, ಅದು ಪರಿ ಣಾಮಕಾರಿಯಾಗುವುದು ಒಳ್ಳೆಯದು.

ಕಾರ್ಖಾನೆಯ ಆಡಳಿತೆಯಲ್ಲಿ ಕಾರ್ಮಿಕರಿಗೆ ಪ್ರಾತಿನಿಧ್ಯ ಕೊಡುವುದೆಂದರೆ ಅದೇ ಸಮಾಜವಾದವೆಂದಾಗಲೀ, ಸಮಾಜವಾದೀ ಸಮಾಜದೆಡೆಗೆ ಮುನ್ನಡೆ ಯೆಂದಾಗಲೀ ಹೇಳುವುದು ಸರಿಯಲ್ಲ. ಆಡಳಿತ ನಿರ್ವಹಣೆಯಲ್ಲಿ ಕಾರ್ಮಿಕ ರಿಗೂ ಭಾಗ ಕೊಡುವುದು, ಕೈಗಾರಿಕೆಯನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗಲು ಪ್ರಯೋಗ ಅಷ್ಟೆ. ಆದ್ದರಿಂದಾಗಿ ಪ್ರಚಾರದ ದೃಷ್ಟಿಯಿಂದ ಸಮಾಜ ವಾದಕ್ಕೆ ಇದು ಅಸ್ತಿಭಾರ ಹಾಕಿದ ಹಾಗೆ ಎಂದು ಹೇಳುವುದರಿಂದ ಯಾರೂ ವಂ ಚಿತರಾಗಬಾರದು.

ಕಾರ್ಮಿಕರಿಗೆ ಆಡಳಿತೆಯಲ್ಲಿ ಭಾಗವಹಿಸುವ ಸಂದರ್ಭ ಬಂದಿರುವಾಗ ಕಾ ರ್ಮಿಕ ವರ್ಗವು ಎಚ್ಚರದಿಂದಿರಬೇಕಾಗಿದೆ. ಈ ಅವಕಾಶವನ್ನು ಬಳಸಿಕೊಂಡು ತಮ್ಮ ಸಂಘಟನೆಯನ್ನು ಹೆಚ್ಚು ಬಲಗೊಳಿಸಬೇಕಾಗಿದೆ. ಟ್ರೇಡ್ ಯೂನಿಯನ್ ಚಳವಳಿಯು ಇನ್ನೂ ಬಲಯುತವಾಗಿಲ್ಲದಿರುವಾಗ, ಇಂಥ ಪ್ರಯೋಗ ನಡೆಯು ತ್ತಿರುವಾಗ ಕಾರ್ಮಿಕರು ತಮ್ಮ ಹಿತವನ್ನು ಕಾಪಾಡಿಕೊಳ್ಳಲು ತಮ್ಮ ಸಂಘಟನೆ ಯನ್ನು ಬಲಗೊಳಿಸುವುದು ಹೆಚ್ಚು ಅಗತ್ಯವಾಗಿದೆ. ಈ ಪ್ರಯೋಗವು ಯಶಸ್ವಿ ಯಾಗುವುದೂ ಬಿಡುವುದೂ ಸಹ ಅದರ ಮೇಲೆ ಅವಲಂಬಿಸಿದೆ.

ಕೇರಳ ಶಾಸನ ಸಭೆಯ ಅಧಿವೇಶನಾರಂಭ

ಪರಿಸ್ಥಿತಿಯ ಅವಲೋಕನೆ

ಇದೇ ಜೂನ್ 30ರಿಂದ ಕೇರಳದ ಶಾ ಸನ ಸಭೆಯ ಅಧಿವೇಶನವು ಆರಂಭವಾ ಗಿದೆ. ದೇವೀಕುಳಂನಲ್ಲಿ ಕಾಂಗ್ರೆಸ್ಸಿಗಾದ ಮಹಾ ಸೋಲು ಮತ್ತು ಪಿ. ಎಸ್. ಪಿ. ಸದಸ್ಯರೊಬ್ಬರು ತಮ್ಮ ಮತಾಧಿಕಾರವ ನ್ನು ಕಳೆದುಕೊಂಡಿರುವದರಿಂದ ಆಡಳಿತ ಪಕ್ಷದ ಬಲವು ಮೊದಲಿಗಿಂತ ಹೆಚ್ಚಿದೆ.

ಆಡಳಿತವನ್ನು ವಹಿಸಿಕೊಂಡಿರುವ ಕ ಮ್ಯೂನಿಸ್ಟ್ ಪಕ್ಷವು ಕಳೆದ ಉಪಚುನಾವ ಣೆಯಲ್ಲಿ ಜನತೆಯ ವಿಶ್ವಾಸವನ್ನು ನೇರ ವಾಗಿ ಪಡೆದು ಇನ್ನೂ ಬಲಸಂವರ್ಧಿತವಾ ಗಿರುವದರಿಂದಲೂ ಸಚಿವ ಸಂಪುಟವು ಸಾ ಮಾಜಿಕ ಹಾಗೂ ಕಲ್ಯಾಣಕಾರಿಯಾದ ಶಾಸನಗಳನ್ನು ಮೊದಲಿನದಕ್ಕಿಂತಲೂ ಹೆ ಚ್ಚು ವೇಗದಲ್ಲಿ ತರುವುದು ಸಾಧ್ಯವಾಗಬ ಹುದಾಗಿದೆ.

ವಿರೋಧಿಗಳು ಕೊಯಮುತ್ತೂರಿನಲ್ಲಿ ಮುಖ್ಯ ಮಂತ್ರಿಗಳು ಮಾಡಿದ ಭಾಷಣ ವನ್ನೇ ಮುಂದೆ ಮಾಡಿಕೊಂಡು ಹೊರಗಡೆ ಚಳವಳವನ್ನು ನಡೆಸಬಹುದು. ಜನರ ನ್ನು ಕಮ್ಯೂನಿಸ್ಟರು ಮತ್ತು ಕಮ್ಯೂನಿ ಸ್ಟೇತರರು ಎಂದು ವಿಭಜಿಸುವದರ ಬಗ್ಗೆ ಚೀನಾದ ಅಂತರ್ಯುದ್ಧದ ನೆನಪು ಕೊಟ್ಟ ಸಚಿವರ ಭಾಷಣವನ್ನು ಕಾಂಗ್ರೆಸ್ ಹಾ ಗೂ ಪಿ. ಎಸ್. ಪಿ. ನಾಯಕರುಗಳು ಮುಖ್ಯ ಮಂತ್ರಿಯ ಭಾಷಣ "ಅಂತರ್ಯು ದ್ಧದ ಬೆದರಿಕೆ" ಎಂದು ಹೇಳಿಕೊಂಡು ಅ ಲೆಯಬಹುದು.

ಶ್ರೀ ನಂಬೂದಿರಿಪಾಡ್‌ರು ತಮ್ಮ ಕರೆ "ರಾಷ್ಟ್ರೀಯ ಐಕ್ಯತೆ"ಗಾಗಿತ್ತಲ್ಲದೆ "ಅನೈ ಕ್ಯತೆ"ಗಾಗಿರಲಿಲ್ಲ ಎಂದು ಎಷ್ಟು ಸ್ಪಷ್ಟೀಕ ರಣ ಕೊಟ್ಟರೂ ಪೂರ್ವಗೃಹಪೀಡಿತರಾದ ಕಾಂಗ್ರೆಸ್ ಮತ್ತು ಪಿ ಎಸ್. ಪಿ.ಗಳ ವರು ಈ ವಿಷಯವನ್ನು ಸುಲಭವಾಗಿ ಬಿ ಟ್ಟುಕೊಡುವಂಥವರಲ್ಲ. ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕೆ ಎ ದಾ ಮೋದರ ಮೆನನ್ ಮತ್ತು ಪಿ ಎಸ್.ಪಿ. ನಾಯಕ ಪಟ್ಟಂಥಾನು ಪಿಳ್ಳೆ ಇವರುಗಳಂ ತೂ ಈ ವಿಷಯವನ್ನು "ಗಂಭೀರವಾಗಿ ಗಮನಿಸಬೇಕು" ಎಂದು ಕೇಂದ್ರಕ್ಕೆ ವಿಶೇ ಷ ಮನವಿಗಳನ್ನೇ ಮಾಡಿಕೊಂಡರು !

ಕೇರಳದ ಶಿಕ್ಷಣ ಮಸೂದೆಯು, ಸು ಪ್ರೀಂ ಕೋರ್ಟಿನ ತೀರ್ಪಿನಂತೆ, ಕೆಲವು ಅದರ ನಿಬಂಧನೆಗಳು ನ್ಯಾಯಬಾಹಿರವಾ ಗಿದ್ದರೂ ಈ ಹಿಂದೆ ನಿರೀಕ್ಷಿಸಿದಂತೆ ತಿದ್ದು ಪಡಿಗೆ ಬರಲಾರದೆಂದು ಭಾವಿಸಲಾಗಿದೆ. ಕೇಂದ್ರವು ಈ ವರೆಗೂ ಈ ಮಸೂದೆಯ ನ್ನು ಕೇರಳಕ್ಕೆ ವಾಪಸ್ ಕಳುಹಿಸಿಯೇ ಇಲ್ಲ. ವಾಪಸ್ ಕಳುಹಿಸುವದರಲ್ಲಾದ ಈ ನಿಧಾನಕ್ಕೆ ಅಧಿಕಾರೀ ವಲಯಗಳಲ್ಲಿ ತುಂಬಾ ಬೇಜಾರು ಕಂಡುಬರುತ್ತಿದೆ. ಈ ಮಸೂದೆಯು ರಾಜ್ಯದ ವಿಧಾನ ಸಭೆಯ ಲ್ಲಿ ಒಂದು ವರುಷದ ಹಿಂದೆಯೇ ಅಂಗೀಕ ರಿಸಲ್ಪಟ್ಟಿದ್ದರೂ ಫೈಲುಗಳಲ್ಲೇ ಬಿದ್ದು ಕೊಂಡಿರುವ ಶೋಚನೀಯ ಪ್ರಸಂಗ ಒದಗಿದೆ.

ವಿಧಾನ ಸಭೆಯಲ್ಲಿ ವಿರೋಧಿಗಳ ಸ್ಥಿತಿ ಗತಿಗಳ ಸ್ಥಾನಮಾನಗಳನ್ನು ನೋಡಿಯೇ ತಿಳಿಯಬೇಕಾದೀತು. ದೇವೀಕುಳಂನ ಲ್ಲಾದ ಸೋಲು ಅವರನ್ನು ಹತಾಶರನ್ನಾ ಗಿಸಿದೆ, ಅವರ ತಲೆ ಕೆಡಿಸಿದೆ, ಕಹಿಯುಣಿ ಸಿದೆ. ಇದು ಅವರ ಭಾಷಣಗಳಲ್ಲೂ, ಚಟುವಟಿಕೆಗಳಲ್ಲೂ ಚೆನ್ನಾಗಿ ಕಂಡುಬ ರುತ್ತಿದೆ. ತ್ರಿಚೂರು, ಅಲೆಪ್ಪಿ ಮುಂತಾ ದುವುಗಳಲ್ಲಿ ಕಲೆಕ್ಟರ್ ಕಛೇರಿಗಳ ಮುಂ ದೆ ನಡೆದ ಸತ್ಯಾಗ್ರಹದ ಸರಮಾಲೆಗಳೇ ಇದರ ಸೂಚಕವಾಗಿವೆ.

ಕಳೆದ ಸಲದ ಬಡ್ಜೆಟ್ ಅಧಿವೇಶನ, ರಾಜ್ಯಕ್ಕೆ ಪ್ರಧಾನಿಯ ಭೇಟಿ, ಕೇರಳದ ಶಿಕ್ಷಣ ಮಸೂದೆಯ ಬಗ್ಗೆ ಸುಪ್ರೀಮ್ ಕೋರ್ಟಿನ ತೀರ್ಪು, ಮತ್ತು ಇತ್ತೀಚೆಗೆ ಸರ್ಕಾರಿ ನೌಕರರ ವೇತನ ಪ್ರಮಾಣದ ಸುಧಾರಣೆ ಮುಂತಾದುವುಗಳ ಬಗ್ಗೆ ಚರ್ಚೆ ಬಂದರೆ ಕಮ್ಯೂನಿಸ್ಟರು 'ಮುನ್ನಡೆದಿದ್ದೇ ವೆ' ಎಂದೇ ಹೇಳಲು ಅವಕಾಶವಿದೆ.

ಕಳೆದ ಅಧಿವೇಶನದಲ್ಲಿ ಅಂಗೀಕರಿಸಲ್ಪ ಟ್ಟ ಸ್ಟೇ ಅಫ್ ಎವಿಕ್ಷನ್ ಪ್ರೊಸೀಡಿಂಗ್ಸ್ (ಪಂಪ್ಯತ) ಆಕ್ಟು ಮೇ 31ರಂದು ರಾ ಷ್ಟ್ರಾಧ್ಯಕ್ಷರಿಂದ ಮನ್ನಣೆ ಪಡೆಯಿತು. ಇದು ಕೂಡಾ ನಂಬೂದಿರಿಪಾಡ್ ಸಂಪು ಟದ ಮತ್ವದ ವಿಜಯಗಳಲ್ಲೊಂದು ಎಂ ದು ಹೇಳಬಹುದಾಗಿದೆ.

ಶಾಸನ ಸಭೆಯಲ್ಲಿ ಈಗಾಗಲೇ ಕೆಲವು ಹೊಸಹೊಸ ಮಸೂದೆಗಳು ಬಂದಿವೆ. ಈ ಅಧಿವೇಶನದಲ್ಲಿ ಇನ್ನೂ ಕೆಲವು ಹೊಸ ಮಸೂದೆಗಳು ಬರಬಹುದಾಗಿದೆ.

—ಐ. ಪಿ. ಎ.

ಸಿರಿವಂತರನ್ನು ಸಾಕಿ ಬಡವರನ್ನು ಸುಲಿಯುತ್ತಿದೆ !

(೩ನೇ ಪುಟದಿಂದ)

ಸೂಚನೆಗಳನ್ನು ಮಾಡುತ್ತ ಬಂದಿರುತ್ತಾ ರೆ. ನಮ್ಮಲ್ಲಿಯ ಪರದೇಶಿ ಕಂಪೆನಿಗಳು ಕೋಟ್ಯಾವಧಿ ರೂಪಾಯಿಗಳಿಗೆ ತಮ್ಮ ದೇಶಕ್ಕೆ ಒಯ್ಯುತ್ತಿದ್ದಾರೆ. ಇದನ್ನು ತಡೆ ಹಿಡಿಯಬೇಕು. ಪರದೇಶಗಳೊಡನೆ ವ್ಯಾಪಾರ ಖಾಸಗೀ ಜನರಿಂದ ನಡೆಸಲ್ಪ ಡುತ್ತಿದೆ. ಸರಕಾರದವರೇ ಈ ವ್ಯಾಪಾರ ಮಾಡಬೇಕು. ಗಣಿ, ತೋಟ, ಕಾರ್ಖಾ ನೆಗಳು ಇನ್ನೂ ಪರದೇಶೀ ಜನರ ಹಸ್ತಗತ ವಾಗಿವೆ. ಇವುಗಳನ್ನು ರಾಷ್ಟ್ರೀಕರಣ ಮಾ ಡಬೇಕು. ಈ ಕ್ರಮಗಳನ್ನು ಕೈಗೊಂಡರೆ ಒಂದು ನೂರು ಕೋಟಿ ರೂಪಾಯಿಯಾ ಕೆ ಇದರ ನಾಲ್ಕರಷ್ಟು ಹೆಚ್ಚಿಗೆ ಹಣ ದೊರೆಯುತ್ತದೆ. ಆದರೆ ಕಾಂಗ್ರೆಸ್ ಸರ ಕಾರದವರು ಬಂಡವಾಳದಾರರ ಲಾಭಕ್ಕೆ ಕೈಹಚ್ಚದೆ, ಬಡವರನ್ನು ಸುಲಿಯುವುದ ರಲ್ಲೇ ಮಗ್ನರಾಗಿ, ಶಾಂತರೀತಿಯಿಂದ, ಸಾವಕಾಶವಾಗಿ ನಾವು ಸಮತಾವಾದವ ನ್ನು ತರುತ್ತೇವೆಂದು ಜನರಿಗೆ ಮೋಸ ಮಾಡುತ್ತಿರುವರು. ಸರಕಾರದ ಈ ನೀತಿ ಎಂದಿಗೂ ಯಶಸ್ವಿಯಾಗಲಿಕ್ಕೆ ಸಾಧ್ಯವಿ ಲ್ಲ. ರೈತರೂ, ಕೂಲಿಗಾರರೂ, ಮಧ್ಯಮ ವರ್ಗದವರೂ, ಸರಕಾರದ ಧೋರಣೆಯ ನ್ನು, ನೀತಿಯನ್ನು ಚೆನ್ನಾಗಿ ತಿಳಿದು ಕೊಂಡು, ಇದನ್ನು ಪ್ರತಿಭಟಿಸುವುದರ ಸಲುವಾಗಿ ಸಂಘಟಿತರಾಗಬೇಕು.

ಎನ್. ಕೆ. ಉಪಾಧ್ಯಾಯ, ಬಿಜಾಪುರ.

ಭಾರತ ಸರಕಾರದ ನೀತಿ

ಸಿರಿವಂತರನ್ನು ಸಾಕಿ ಬಡವರನ್ನು ಸುಲಿಯುತ್ತಿದೆ!

ಕಾಮ್ರೇಡ್ ಎಸ್. ವಿ. ಪರುಳೇಕರ್, ಎಂ. ಪಿ.

ಎರಡನೇ ಮಹಾಚುನಾವಣೆಯ ನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರಕಾರ ಪಾರ್ಲಿಮೆಂಟಿನಲ್ಲಿ ಮಾಡಿದ ಮೊದಲನೆಯ ಕೆಲಸವೆಂದರೆ ಭಾರತದ ಬಡಜನತೆಯ ಮೇಲೆ ಒಂದುನೂರು ಕೋಟಿ ರೂಪಾಯಿಯಷ್ಟು ಹೊಸ ಕರಗಳನ್ನು ಹೇರಿದ್ದು. ಬಡವರ ಮೇಲಿನ ಕರಭಾರವನ್ನು ಕಡಿಮೆಮಾಡಿ, ಸಿರಿವಂತರ ಮೇಲೆ ಹೆಚ್ಚಿನ ಕರವನ್ನು ಹೇರಿ, ಸಮಾಜವಾದಿ ಸಮಾಜ ರಚನೆ ಮಾಡುತ್ತೇವೆಂದು ಚುನಾವಣೆಯ ಸಮಯದಲ್ಲಿ ಜನರಿಗೆ ಆಶ್ವಾಸನವಿತ್ತಿದ್ದ ಕಾಂಗ್ರೆಸ್ ಸರಕಾರ ಬಡವರನ್ನು ಬಡವರನ್ನಾಗಿಯೇ ಮಾಡುವ ಮತ್ತು ಧನಿಕರನ್ನು ಇನ್ನೂ ಹೆಚ್ಚು ಧನಿಕರನ್ನಾಗಿ ಮಾಡುವ ನೀತಿಯನ್ನು ಬಿಟ್ಟುಕೊಟ್ಟಿಲ್ಲ.

ಕೈಗಾರಿಕೋದ್ಯಮದ ಉತ್ಪನ್ನವನ್ನು ನೋಡೋಣ: 1948ರಲ್ಲಿ 1480 ಕೋಟಿ ರೂಪಾಯಿಯ ಉತ್ಪನ್ನವಾಗಿದ್ದರೆ, 1950ರಲ್ಲಿ 1530 ಕೋಟಿ, 1952ರಲ್ಲಿ 1700 ಕೋಟಿ ಮತ್ತು 1956ರಲ್ಲಿ 1870 ಕೋಟಿ ರೂಪಾಯಿ. ಎಂಟು ವರ್ಷಗಳಲ್ಲಿ 390 ಕೋಟಿ ರೂಪಾಯಿಯ ಉತ್ಪಾದನೆ ಹೆಚ್ಚಾಗಿದೆ. ಅಂದರೆ ಕೆಲಸಗಾರರು ಹೆಚ್ಚಿಗೆ ದುಡಿದಿದ್ದಾರೆ. ಆದರೆ ಕೆಲಸಗಾರರಿಗೆ ಜಾಸ್ತಿ ಲಾಭ ಸಿಗಲಿಲ್ಲ. ಕಾರ್ಖಾನೆದಾರರಿಗೆ ಹೆಚ್ಚಿನ ಲಾಭ ಸಿಕ್ಕಿತು. ಯಾಕಂದರೆ ಉತ್ಪಾದನೆ ಹೆಚ್ಚಾಯಿತು.

ಎರಡನೆಯದಾಗಿ ಕೈಗಾರಿಕೆಯಲ್ಲಿಯ ಲಾಭ ನೋಡೋಣ. 1949ರಲ್ಲಿ 181 ಕೋಟಿ ರೂಪಾಯಿ, 1951ರಲ್ಲಿ 310 ಕೋಟಿ ರೂಪಾಯಿ 1955ರಲ್ಲಿ 334 ಕೋಟಿ ರೂಪಾಯಿ ಲಾಭ ದೊರಕಿದೆ.

ಕರ ಯಾರ ಮೇಲೆ ?

ಈ ರೀತಿ ಉತ್ಪಾದನೆ ಮತ್ತು ಲಾಭ ಹೆಚ್ಚಾದಾಗ ಕರ ಯಾರ ಮೇಲೆ ಬಿದ್ದಿದೆಂಬುದನ್ನು ನೋಡೋಣ.

ಉತ್ಪನ್ನಕರ 1948ರಲ್ಲಿ 133 ಕೋಟಿ ರೂಪಾಯಿ, 1950ರಲ್ಲಿ 150 ಕೋಟಿ, 1955ರಲ್ಲಿ 130 ಕೋಟಿ ರೂಪಾಯಿ.

ಅಪ್ರತ್ಯಕ್ಷಕರ 1948ರಲ್ಲಿ 362 ಕೋಟಿ ರೂಪಾಯಿ, 1950ರಲ್ಲಿ 428 ಕೋಟಿ, 1955ರಲ್ಲಿ 522 ಕೋಟಿ ರೂಪಾಯಿ.

ಪ್ರತ್ಯಕ್ಷ ಕರ	48–49	56–57
ಕೇಂದ್ರದ ಎಕ್ಸೈಸ್	(ಕೋಟಿಗಳಲ್ಲಿ)	
ಡ್ಯೂಟಿ	51	188
ಚಿಮಿಣಿ ಎಣ್ಣೆ	20	10
ಸಕ್ಕರೆ	6	18
ಉಂಬೆಣ್ಣೆ (ತಿನ್ನುವ ಎಣ್ಣೆ)	2	8

ಈ ರೀತಿ ಪ್ರತ್ಯಕ್ಷ ಕರ 160 ಕೋಟಿ ರೂಪಾಯಿಗಳಲ್ಲಿ ಹೆಚ್ಚಾಗಿದೆ ಮತ್ತು ಪ್ರತ್ಯಕ್ಷ ಕರ ಇದಕ್ಕಿಂತಲೂ ಹೆಚ್ಚಾಗಿದೆ. ಬಡವರು ಪ್ರತಿ ದಿವಸ ಉಪಯೋಗಿಸುವ ವಸ್ತುಗಳ ಮೇಲೂ ಕರಗಳನ್ನು ಹೇರಲಾಗಿದೆ. ಆದರೆ ಈ ಕರಭಾರವೆಲ್ಲ ಬಡವರ ಮೇಲೆ ಬೀಳುತ್ತದೆ. ಹೆಚ್ಚಿಗೆ ಉತ್ಪಾದನೆ ಮಾಡಿ, ಜಾಸ್ತಿ ಲಾಭ ಗಳಿಸುತ್ತಿರುವ ಬಂಡವಾಳಶಾಹಿಗಳ ಮೇಲೆ ಕರಭಾರ ಕಡಿಮೆಯಾಗುತ್ತಿದೆ.

ರೈಲ್ವೆಯಲ್ಲಿ ಕೂಡ ಹೀಗೆ !

ರೈಲ್ವೆ ಉದಾಹರಣೆ ನೋಡೋಣ:

ಏರ್ ಕಂಡೀಷನ್ ಡಬ್ಬಿಗೆ 1949ರಲ್ಲಿ ಒಂದು ಮೈಲಿಗೆ 36 ದುಡ್ಡು ಇದ್ದರೆ 1956ರಲ್ಲಿ 32 ದುಡ್ಡಿಗೆ ಚಾರ್ಜನ್ನು ಇಳಿಸಲಾಯಿತು. ಮೊದಲನೇ ವರ್ಗದ ಡಬ್ಬಿಗೆ 48ರಲ್ಲಿ ಮೈಲಿಗೆ 30 ದುಡ್ಡು ಇದ್ದುದನ್ನು 1956ರಲ್ಲಿ 16 ದುಡ್ಡು ಮಾಡಲಾಗಿದೆ. ಮೂರನೇ ವರ್ಗದ ಡಬ್ಬಿಗೆ 48ರಲ್ಲಿ ಮೈಲಿಗೆ 3 ದುಡ್ಡು ಇದ್ದುದನ್ನು 56ರಲ್ಲಿ 5½ ದುಡ್ಡು ಮಾಡಲಾಗಿದೆ. ಹೀಗೆ 1956ರಲ್ಲಿ ಸಿರಿವಂತ ಜನರ ಡಬ್ಬಿಗಳಲ್ಲಿ ಪ್ರಯಾಣ ಮಾಡುವವರಿಗೆ ಟಿಕೇಟಿನ ದರ ಕಡಿಮೆ ಮಾಡಿ, ಮೂರನೇ ವರ್ಗದ ಬಡವರಿಗೆ ಜಾಸ್ತಿ ಮಾಡಲಾಗಿದೆ. ಇಂಥ ಪರಿಸ್ಥಿತಿಯಲ್ಲಿ ಈ ವರ್ಷ ಸರಕಾರದವರು ಎಲ್ಲರಿಗೂ ಸಂಸಮಾನವಾಗಿ 10% ಹೆಚ್ಚಿಗೆ ಮಾಡುತ್ತೇವೆಂದು ಹೇಳಿ, ಅದರಂತೆಯೇ ಮಾಡಿದರು ಇದು ಮೂರನೇ ವರ್ಗದವರ ಮೇಲೆ ಹೆಚ್ಚಾಯಿತು, ಮೊದಲನೇ ವರ್ಗದವರ ಮೇಲೆ ಕಡಿಮೆಯಾಯಿತು. ಸರಕಾರದ ಈ ಕರ ಹೇರುವ ನೀತಿಯಿಂದಾಗಿ ಬಡವರು ಬಡವರೇ ಆಗುತ್ತಿದ್ದಾರೆ, ಶ್ರೀಮಂತರು ಶ್ರೀಮಂತರಾಗುತ್ತಿದ್ದಾರೆ. ಈ ಕ್ರಮದಿಂದ ನಾವು ಬಂಡವಾಳಶಾಹಿಗಳನ್ನೂ ಬಡವರನ್ನಾಗಿಯೇ ಮಾಡುತ್ತೇವೆಂದು ನೆಹರೂರವರು ಹೇಳುತ್ತಿರುವರು. ಅವರ ಅಂಕೆ-ಸಂಖ್ಯೆಗಳೇ ಇದನ್ನು ಅಲ್ಲಗಳೆಯುತ್ತಿವೆ.

ದೇಶದ ಸಂಪತ್ತನ್ನು ತುಡುಗು ಮಾಡುವ, ಕರಗಳನ್ನು ಮುಳುಗಿಸುವ ಬಂಡವಾಳಗಾರರಿಗೆ ಕಾಂಗ್ರೆಸ್ ಸರಕಾರ ಸಂರಕ್ಷಣೆ ಕೊಡುತ್ತಿದೆ. ಮುಂದ್ರಾ, ಟಿಲಕೋ ಮತ್ತು ಕೋಲಾರದ ಬಂಗಾರದ ಚಿನ್ನದ ಗಣಿಯ ಪ್ರಕರಣಗಳೇ ಇದಕ್ಕೆ ಸಾಕ್ಷಿ.

ಮುಂದ್ರಾ ಪ್ರಕರಣವಂತೂ ಸಾಕಷ್ಟು ಪ್ರಚಾರಕ್ಕೆ ಬಂದಿದೆ. ಕೋಟ್ಯಾವಧಿ ರೂಪಾಯಿಗಳನ್ನು ಮುಂದ್ರಾನಿಗೆ ದಾನ ಮಾಡಿದ ಟಿ. ಟಿ. ಕೃಷ್ಣಮಾಚಾರಿಯಂಥವರ ಮೇಲೆ ನೆಹರೂರವರು ದಯೆ ತೋರಿಸುತ್ತಿರುವರು. ದೇಶದ ಹಣ ಹಾಳಾದ್ದಕ್ಕಾಗಿ ಅವರ ಮನಸ್ಸು ಕರಗುವುದಿಲ್ಲ.

ಟಿಸ್ಕೋ ಪ್ರಸಿದ್ಧಿಯಾದ ತಾತಾ ಕಂಪೆನಿಯ ಪ್ರಕರಣ ರೋಮಾಂಚಕಾರಿಯಾಗಿದೆ.

ಟಿಸ್ಕೊ ಕತೆ

1947ರಲ್ಲಿ ಕೇಂದ್ರ ಸರಕಾರದವರು ತಾತಾ ಕಂಪೆನಿಯ ಕೂಡ, ರೈಲ್ವೆ ಇಂಜಿನು ಉತ್ಪಾದನೆ ಮಾಡುವುದರ ಸಲುವಾಗಿ ಒಂದು ಒಪ್ಪಂದ ಮಾಡಿಕೊಂಡರು. ಆದರೆ ಈ ಒಪ್ಪಂದ 1945ರಿಂದಲೇ ಕಾರ್ಯರೂಪದಲ್ಲಿ ಬರಬೇಕೆಂದು ಆ ಒಪ್ಪಂದಲ್ಲಿ ಉಲ್ಲೇಖಿಸಲಾಗಿದೆ. ಒಪ್ಪಂದವಾಗುವುದಕ್ಕಿಂತ ಎರಡು ವರ್ಷಗಳ ಮುಂಚಿತವಾಗಿಯೇ ಈ ಕರಾರು ಕೃತಿಯಲ್ಲಿ ಬರಬೇಕೆಂದು ಹೇಳುವ ಮಾತು ಎಷ್ಟು ನ್ಯಾಯದ್ದಾಗಿಂತ್ತೆಬುದನ್ನು ನೀವೇ ವಿಚಾರಿಸಿರಿ. 450 ರೇಲ್ವೆ ಇಂಜಿನುಗಳನ್ನು ಉತ್ಪಾದನೆ ಮಾಡುತ್ತಿದ್ದ, ಅಜ್ಮೀರದಲ್ಲಿಯ ಸರಕಾರಿ ಇಂಜಿನ್ ಕಾರ್ಖಾನೆಯನ್ನು ಬಂದು ಮಾಡಿ, ತಾತಾ ಕಂಪೆನಿಯವರ ಕೂಡ ಒಪ್ಪಂದ ಮಾಡಿಕೊಂಡರು. ಇದರ ಒಟ್ಟು ಬಂಡವಾಳ ತಾತಾ ಕಂಪೆನಿಯ 2 ಕೋಟಿ, ಸರಕಾರದ 5 ಕೋಟಿ ರೂಪಾಯಿ. ಈ ಕಾರ್ಖಾನೆಯಲ್ಲಿ ತಯಾರಾಗುತ್ತಿರುವ ರೇಲ್ವೆ ಇಂಜಿನಿಗೆ ರೂ. 6,90,000 ಬೆಲೆ. ಆದರೆ ಇಂಥದ್ದೇ ಎಂಜಿನನ್ನು ಜರ್ಮನಿಯಿಂದ ತರಿಸಿದರೆ ರೂ. 3,40,000 ಜಪಾನಿನಿಂದ ತರಿಸಿದರೆ, ರೂಪಾಯಿ 3,18,000, ಇಂಗ್ಲೆಂಡಿನಿಂದ ತರಿಸಿದರೆ ರೂ. 4,15,000. ಎರಡರಷ್ಟು ಹೆಚ್ಚಿಗೆ ಹಣಕೊಟ್ಟು ನಾವು ತಾತಾರವರಿಂದ ಎಂಜಿನ್ ಖರೀದಿ ಮಾಡಬೇಕು. ತಾತಾರವರ ಕೂಡ ಮಾಡಿಕೊಂಡ ಒಪ್ಪಂದ 1960ರಲ್ಲಿ ಮುಗಿಯುವಾಗ ತಾತಾರವರಿಗೆ ಈ ಕಾರ್ಖಾನೆಯನ್ನು ಪುಕ್ಕಟೆಯಾಗಿ ಕೊಟ್ಟಂತಾಗುತ್ತದೆ. ಯಾಕೆಂದರೆ ಡಿಪ್ರಿಸಿಯೇಶನ್ ಫಂಡಿಗೆ ಅಷ್ಟು ಹಣ ತೆಗೆದಿಡಲಾಗುತ್ತಿದೆ.

೫೦ ಲಕ್ಷ ರೂಪಾಯಿ ದಾನ

ಕೋಲಾರದ ಚಿನ್ನದ ಗಣಿ ಪ್ರಕರಣ ನೋಡಿ ಯಾರಾದರೂ ಗಾಬರಿಯಾಗಲೇಬೇಕು. ಜಾನ್‌ಟೈಲರರ ಮಾಲಕಿಯಲ್ಲಿದ್ದ ಕೋಲಾರದ ಚಿನ್ನದಗಣಿ ಸ್ಟರ್ಲಿಂಗ್ ಕಂಪೆನಿಯಾಗಿತ್ತು. ಸ್ವರಾಜ್ಯ ಸಿಕ್ಕಿದ ತರುವಾಯ, ಈ ಕಂಪೆನಿಯನ್ನು ಎರಡು ಭಾಗಮಾಡಿ, ಇಂಗ್ಲೆಂಡಿನಲ್ಲಿದ್ದ 50 ಲಕ್ಷರೂಪಾಯಿಯನ್ನು ಸ್ಟರ್ಲಿಂಗ್ ಕಂಪೆನಿಯ ಮಾಕಲಿತ್ವಕ್ಕೂ, 134 ಲಕ್ಷ ರೂಪಾಯಿ ಸಾಲವಿರುವ ಆಸ್ತಿಯನ್ನು ರೂಪಾಯಿ ಕಂಪೆನಿಗೂ ಜಮಾ ಹಿಡಿಯಲಾಯಿತು. ಈ ಕಂಪೆನಿಯನ್ನು ರಾಷ್ಟ್ರೀಕರಣ ಮಾಡುವಾಗ 87½ ಲಕ್ಷ ರೂಪಾಯಿ ಪರಿಹಾರ ಧನ ಕೊಡಬೇಕೆಂದು ಮೈಸೂರು ಸರಕಾರ ನಿರ್ಣಯಿಸಿತ್ತು. ಬ್ರಿಟಿಷ್ ಸರಕಾರದ ಒತ್ತಾಯದಿಂದ ಕೇಂದ್ರ ಸರಕಾರದವರು ಇದರಲ್ಲಿ ಕೈಹಾಕಬೇಕಾಯಿತು. ಕೇಂದ್ರ ಸರಕಾರದವರು ಸಿ. ಡಿ. ದೇಶಮುಖರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ನೇಮಿಸಿದರು. ಈ ಕಮಿಟಿಯವರು, 169 ಲಕ್ಷ ರೂಪಾಯಿ ಪರಿಹಾರ ಕೊಡಬೇಕೆಂದೂ, ಆದರೆ ಇಂಗ್ಲೆಂಡಿನಲ್ಲಿಂದ 50 ಲಕ್ಷ ರೂಪಾಯಿಯನ್ನು ಕಡಿತಮಾಡಿ, ಬರೀ 119 ಲಕ್ಷರೂಪಾಯಿ ಕೊಡಬೇಕೆಂದೂ ಹೇಳಿದರು. ಅಷ್ಟೊತ್ತಿಗೆ ದೇಶಮುಖರು ಅರ್ಥಿಕ ಮಂತ್ರಿ ಪದಕ್ಕೆ ರಾಜೀನಾಮೆಯಿತ್ತರು. ಟಿ. ಟಿ. ಕೃಷ್ಣಮಾಚಾರಿಯವರು ಅವರ ಸ್ಥಾನಕ್ಕೆ ಬಂದ ಕೂಡಲೇ 164 ಲಕ್ಷ ರೂಪಾಯಿ ನಗದಿ ಹಣ ಕೊಟ್ಟರು. ಬ್ರಿಟಿಷ್ ಕಂಪೆನಿಯವರಿಗೆ, ಕೃಷ್ಣಮಾಚಾರಿಯವರಿಂದ 50 ಲಕ್ಷ ರೂಪಾಯಿ ದಾನವಾಗಿ ಕೊಡಲಾಯಿತು.

> ಶ್ರೀಯುತರು ಬಿಜಾಪುರದ ಸಾರ್ವಜನಿಕ ಸಭೆಯಲ್ಲಿ ಮಾಡಿದ ಭಾಷಣದ ಸಾರಾಂಶವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.
>
> —ಸಂ.

ಮೋಸಗಾರರ ಮೇಲೆ ವಿಶ್ವಾಸ

ಜನರ ಮೇಲೆ ಹೊಸ ಕರಭಾರ ಹೇರಿ, ಆ ಹಣವನ್ನು ಜನರಿಗೆ, ದೇಶಕ್ಕೆ ಮೋಸ ಮಾಡುವ ಬಂಡವಾಳದಾರರಿಗೆ, ಕಂಪೆನಿ ಮಾಲಕರಿಗೆ, ತಮ್ಮ ಲಾಭದ ಸಲುವಾಗಿ ಅಪವ್ಯಯ ಮಾಡುತ್ತಿರುವ ಕಾಂಗ್ರೆಸ್ ಸರಕಾರದ ನೀತಿ ಖಂಡನೀಯವಾಗಿದೆ. ಪಂಚವಾರ್ಷಿಕ ಯೋಜನೆಗಳನ್ನು ಯಶಸ್ವಿಮಾಡುವುದರ ಸಲುವಾಗಿ ಹೆಚ್ಚಿಗೆ ದುಡಿಯಿರಿ, ಶ್ರಮಮಾಡಿರಿ, ಕರ ಹೆಚ್ಚಿಗೆ ಕೊಡಿರೆಂದು ಹೇಳುತ್ತಿರುವ ನೆಹರೂರವರು, ಬಡವರನ್ನು ಸುಲಿದು ಹೆಚ್ಚು ಲಾಭ ಗಳಿಸುವ, ಕರಕೊಡದೆ ಸರಕಾರಕ್ಕೆ ಮೋಸಮಾಡುವ ಕಂಪೆನಿ ಮಾಲಿಕರ ಮೇಲೆ ಯಾವ ಕ್ರಮತೆಗೆದುಕೊಳ್ಳಲಿಕ್ಕೂ ತಯಾರಿಲ್ಲ. ಕಂಪೆನಿ ಮಾಲಕರು ಎಷ್ಟು ಲಾಭ ಗಳಿಸುತ್ತಾರೆ, ಎಷ್ಟು ಖೊಟ್ಟಿ ಲೆಕ್ಕ ಪತ್ರ ಇಡುತ್ತಾರೆ, ಅವರ ಬಂಡವಾಳ ಎಷ್ಟಿದೆ, ಎಂಬುದರ ಗುಟ್ಟು ಕಂಡುಹಿಡಿಯಬೇಕಾದರೆ ನೆಹರೂರವರ ಈ ಕಂಪೆನಿಗಳಲ್ಲಿ ದುಡಿಯುತ್ತಿರುವ ಗುಮಾಸ್ತ, ಕಾರಕೂನರನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡು, ಕಂಪೆನಿಯವರು ಅಂಥವರನ್ನು ತೆಗೆದುಹಾಕಿದರೆ, ಅಂಥವರಿಗೆ ಉಪಜೀವನದ ವ್ಯವಸ್ಥೆ ಮಾಡಿದರೆ, ಅವರೆಲ್ಲ, ಕಂಪನಿ ಮಾಲಕರ ಒಳಗುಟ್ಟನ್ನು ತಿಳಿಸಿ, ಸರಕಾರಕ್ಕೆ ಲಾಭ ಮಾಡಿಕೊಡುತ್ತಾರೆ. ಆದರೆ ನೆಹರೂರವರು ದುಡಿಯುವವರ ಮೇಲೆ ವಿಶ್ವಾಸವಿಡದೆ, ತಮಗೆ ಮೋಸ ಮಾಡುತ್ತಿರುವ ಮಾಲಕರಿಗೆ ಬೆಂಬಲ ಕೊಡುತ್ತಿರುವರು. ಕಾಂಗ್ರೆಸ್ ಸರಕಾರದವರು ಬಡವರ, ಕೂಲಿಗಾರರ ಮೇಲೆ ದಬ್ಬಾಳಿಕೆ ಮಾಡುತ್ತಾರೆ. ಮುಂಧ್ರಾ, ಡಾಲಮಿಯಾ, ತಾತಾ ಮೊದಲಾದವರನ್ನು ಸಾರ್ವಜನಿಕ ಸ್ಥಳದಲ್ಲಿ ತಂದು ದಂಡಿಸುತ್ತಾರೆಯೇ? ಇಲ್ಲ. ಯಾಕಂದರೆ ಇಂಥವರೆಲ್ಲ ಕಾಂಗ್ರೆಸ್ ಚುನಾವಣಾ ನಿಧಿಗೆ ಲಕ್ಷಾವಧಿ ರೂಪಾಯಿ ಸಹಾಯ ಮಾಡುತ್ತಿದ್ದಾರೆ.

ಧನ ಸಂಗ್ರಹಕ್ಕೆ ದಾರಿ

ಪಂಚವಾರ್ಷಿಕ ಯೋಜನೆಗೆ ಹಣ ಬೇಕಾಗಿದ್ದು, ಹೆಚ್ಚು ಕರ ಕೊಡಬೇಕೆಂದು ನೆಹರೂರವರು ಹೇಳುತ್ತಿದ್ದಾರೆ. ಕಮ್ಯೂನಿಸ್ಟ್ ಪಾರ್ಟಿಯವರು ಬೇರೆ ರೀತಿಯಿಂದ ಬೇಕಾದಷ್ಟು ಹಣ ಕೂಡಿಸುವ

(೨ನೇ ಪುಟ ನೋಡಿ)

ತಾಷ್ಕೆಂಟಿನಲ್ಲಿ ಏಷ್ಯಾ-ಆಫ್ರಿಕಾ ಬರೆಹಗಾರರ ಸಮ

> ಏಷ್ಯಾ—ಆಫ್ರಿಕೆಗಳ ತಾಷ್ಕೆಂಟ್ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಮಾಸ್ಕೋವಿನಲ್ಲಿ ಜೂನ್ 2, 3 ಮತ್ತು 4ನೆಯ ತಾರೀಖುಗಳಂದು ಸೇರಿದ್ದ ಸೇರಿದ ಸಿದ್ಧತಾ ಸಮಿತಿಯ ಸಭೆಯಲ್ಲಿ ಅಂಗೀಕರಿಸಲ್ಪಟ್ಟ ಮನವಿಯನ್ನು ಶ್ರೀ ತಾರಾಶಂಕರ್ ಬ್ಯಾನರ್ಜಿ ಅವರು ಪತ್ರಿಕೆಗಳಿಗೆ ಕೊಟ್ಟಿದ್ದಾರೆ. ಭಾರತದಿಂದ ಬ್ಯಾನರ್ಜಿ ಮತ್ತು ಶ್ರೀ ಮುಲ್ಕ್‌ರಾಜ್ ಆನಂದ್ ಇವರಿಬ್ಬರೂ ಮಾಸ್ಕೋವಿಗೆ ತೆರಳಿದ್ದರು.
>
> ತಾಷ್ಕೆಂಟ್‌ನಲ್ಲಿ ಅಕ್ಟೋಬರ್ ೧ರಿಂದ ೫ರ ವರೆಗೆ ಸೇರಲಿರುವ ಈ ಮಹಾ ಸಮ್ಮೇಲನಕ್ಕೆ ಪೂರ್ವಭಾವಿಯಾಗಿ ಭಾರತೀಯ ಸಿದ್ಧತಾ ಸಮಿತಿಯೊಂದನ್ನು ರಚಿಸಲು ತಾರಾಶಂಕರ್ ಬ್ಯಾನರ್ಜಿ ಮತ್ತು ಮುಲ್ಕರಾಜ್ ಆನಂದ್ ಇವರುಗಳು ಯೋಜಿಸಿದ್ದಾರೆ. ಈ ಸಿದ್ಧತಾ ಸಮಿತಿಯು ತಾಷ್ಕೆಂಟ್ ಅಧಿವೇಶನಕ್ಕೆ ಭಾರತೀಯ ಲೇಖಕರ ಪ್ರತಿನಿಧಿಗಳನ್ನು ಚುನಾಯಿಸುವುದು. ಈ ಸಿದ್ಧತಾ ಸಮಿತಿಯಲ್ಲಿ ಸಾಹಿತ್ಯ ಅಕಾಡೆಮಿಯ ಸಾಹಿತಿಗಳು, ಇನ್ನಿತರ ಲೇಖಕರ ಸಂಘಟನೆಗಳ ಲೇಖಕರು ಮತ್ತು ಬೇರೆ ಬೇರೆ ಸಾಹಿತಿಗಳು ಇರುತ್ತಾರೆ.

ಭಾರತದೇಶ, ಚೀಣಾ, ಸಂಯುಕ್ತ ಅರಬ್ ಜನತಂತ್ರ, ಸೋವಿಯೆತ್ ಒಕ್ಕೂಟ ಮತ್ತು ಜಪಾನ್ ದೇಶಗಳ ಲೇಖಕರ ಸಿದ್ಧತಾ ಸಮಿತಿಯ ಸಭೆ ಮಾಸ್ಕೋದಲ್ಲಿ ನಡೆದು, ಉಜ್ಬೆಕ್ ಗಣತಂತ್ರದ ರಾಜಧಾನಿ ತಾಷ್ಕೆಂಟನಲ್ಲಿ ನಡೆಯಲಿರುವ ಏಶಿಯಾ-ಆಫ್ರಿಕಾ ಲೇಖಕರ ಸಮ್ಮೇಲನಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಚರ್ಚಿಸಿತು.

ಏಶಿಯದ ಲೇಖಕರ ಪ್ರಥಮ ಸಮ್ಮೇಲನವು 1956ರಲ್ಲಿ ದಿಲ್ಲಿಯಲ್ಲಿ ನಡೆಯಿತು. ಎಲ್ಲಾ ಏಶಿಯನ್ ದೇಶಗಳ ಲೇಖಕರೂ, ಸೋವಿಯೆತ್ ಪ್ರತಿನಿಧಿಗಳೂ ಅಲ್ಲಿ ಸಮಾವೇಶಗೊಂಡಿದ್ದರು. ದ್ವಿತೀಯ ಸಮ್ಮೇಲನವು ತಾಷ್ಕೆಂಟನಲ್ಲಿ ನಡೆಯಬೇಕೆಂದು ಸೋವಿಯೆತ್ ನಿಯೋಗವು ಆಹ್ವಾನಿಸಿತು. ಈಗ ನಮ್ಮ ಸಿದ್ಧತಾ ಸಮಿತಿಯು ತುಂಬಾ ಕೆಲಸ ಮಾಡಿದೆ. ಮಾಸ್ಕೋದಲ್ಲಿ, ನಾವಿದ್ದ ವೇಳೆಯಲ್ಲಿ ನಾವು ಎಲ್ಲ ವಿಷಯಗಳ ಬಗ್ಗೆಯೂ ಒಮ್ಮತದ ನಿರ್ಣಯಕ್ಕೆ ಬಂದಿದ್ದೇವೆ—ಎಂದು ಭಾರತೀಯ ಲೇಖಕರ ಪ್ರತಿನಿಧಿ ತಾರಾ ಶಂಕರ ಬ್ಯಾನರ್ಜಿಯವರು ಸಿದ್ಧತಾ ಸಮಿತಿಯ ಕಾರ್ಯಸಾಧನೆಯ ಬಗ್ಗೆ ಪತ್ರಿಕಾ ಸಮ್ಮೇಲನದಲ್ಲಿ ತಿಳಿಸಿದರು. ಡಾ॥ ಮುಲ್ಕ್‌ರಾಜ್ ಆನಂದ್‌ರವರು ಈ ಬಗ್ಗೆ ತಯಾರಿಸಲಾಗಿದ್ದ ವಿಶೇಷ ಪ್ರಕಟನೆಯನ್ನು ಓದಿ ಹೇಳಿದರು. ಅಕ್ಟೋಬರ್ ದಿನಾಂಕ 1 ರಿಂದ 5ರ ವರೆಗೆ ಲೇಖಕ ಸಮ್ಮೇಲನವು ತಾಷ್ಕೆಂಟನಲ್ಲಿ ನಡೆಯಬೇಕೆಂದು ನಿರ್ಣಯಿಸಲಾಗಿದೆ.

ತಾಷ್ಕೆಂಟನಲ್ಲಿ ಕೂಡಲಿರುವ ಏಶಿಯಾ-ಆಫ್ರಿಕಾ ಲೇಖಕ ಸಮ್ಮೇಲನ ಸಿದ್ಧತಾ ಸಮಿತಿ ಅಂತಿಮ ನಿರ್ಣಯವನ್ನು ಕೈಗೊಳ್ಳುವುದು. ಈ ಸಮಿತಿಯು ತನ್ನ ಚಟುವಟಿಕೆಯನ್ನು ಸರಿಯಾಗಿ ನಿರ್ವಹಿಸಲು ಸಾಧ್ಯವಾಗುವಂತೆ, ಆಲ್ಜೀರಿಯಾ, ಆಫ್ಘಾನಿಸ್ತಾನ, ಬರ್ಮಾ, ಘನಾ, ಭಾರತದೇಶ, ಇಂಡೋನೇಷಿಯಾ, ಇರಾನ್, ಕ್ಯಾಮೆರೂನ್ ದ್ವೀಪಗಳು, ಚೀಣಾ, ಮಂಗೋಲಿಯಾ, ನೈಜೀರಿಯಾ, ಸಂಯುಕ್ತ ಅರಬ್ ಗಣತಂತ್ರ, ಪಾಕಿಸ್ತಾನ, ಸೋವಿಯೆತ್ ಒಕ್ಕೂಟ, ಥಾಯ್ಲಂಡ್, ತ್ಯೂನಿಷಿಯಾ, ತುರ್ಕಿ, ಸಿಲೋನ್, ದಕ್ಷಿಣ ಆಫ್ರಿಕದ ಒಕ್ಕೂಟ ಮತ್ತು ಜಪಾನ್ ದೇಶಗಳು ತಮ್ಮ ಪ್ರತಿನಿಧಿಗಳನ್ನಾರಿಸಬೇಕೆಂದು ಈ ಸಭೆ ಶಿಫಾರಸು ಮಾಡಿದೆ.

ಈ ಪ್ರಕಟನೆಯ ಜತೆಗೆ ಏಶಿಯಾ-ಆಫ್ರಿಕಾ ಲೇಖಕರಿಗಾಗಿ ಹೊರಡಿಸುವ ಮನವಿಯನ್ನೂ ಡಾ॥ ಮುಲ್ಕ್‌ರಾಜ್ ಆನಂದ್‌ರವರು ಓದಿ ಹೇಳಿದರು. ಅದು ಹೀಗಿದೆ:

ಏಷ್ಯಾ—ಆಫ್ರಿಕಾ ಲೇಖಕರಿಗಾಗಿ ಹೊರಡಿಸಲಾದ ಮನವಿ

ಏಶಿಯಾ-ಆಫ್ರಿಕಾ ಖಂಡಗಳ ಲೇಖಕರಿಗೆ ಸ್ಫೂರ್ತಿ ನೀಡುವ ತೋರ್ಕೆಯು ನೂತನ ಜಗತ್ತಿನದು ಈ ಜಗತ್ತಿನಲ್ಲಿ. ಆ ದೇಶಗಳ ಜನತೆಗಳು ಇತ್ತೀಚಿನ ಮಬ್ಬುಗವಿದ ಭೂತಕಾಲದಿಂದ, ಹೊಸ ಹುಟ್ಟಿನ ಪ್ರಕಾಶದೆಡೆಗೆ ಸಾಗುತ್ತಿದ್ದಾರೆ.

ಬಹು ಕಾಲದಿಂದ ಈ ಎರಡು ಖಂಡಗಳು ಪರಸ್ಪರ ಬೇರೆಯಾಗಿದ್ದ ಕಾರಣ, ಪ್ರತಿಯೊಂದು ಖಂಡದಲ್ಲಿನ ದೇಶಗಳೂ ಬೇರೆ ಬೇರೆಯಾಗಿಯೇ ಉಳಿದಿದ್ದ ಕಾರಣ, ರಚನಾತ್ಮಕ ಲೇಖಕರು ಪರಸ್ಪರರನ್ನು ಸಂಧಿಸಿ, ಮೇಧಾವಿಗಳಿಗೆ ಮುಖ್ಯವಾಗಿರಬೇಕಾದ ವೈಯಕ್ತಿಕ ಸ್ನೇಹವನ್ನು ಬೆಳೆಸಿಕೊಳ್ಳಲು ಸಾಧ್ಯವಾಗಿಲ್ಲ. ಏಶಿಯದ ಮತ್ತು ಆಫ್ರಿಕದ ಗಡಿಗಳಿಂದಾಚೆಗೆ, ಕೇವಲ ಹಲವೇ ಜನ ಲೇಖಕರ ಕೆಲವು ಕೃತಿಗಳು ಮಾತ್ರವೇ ಪರಿಚಿತವಾಗಿವೆ.

ಆದರೂ ಕೂಡ ಸಾವಿರಾರು ವರ್ಷಗಳಿಂದ, ಕಠಿಣ ಪ್ರಮಾಣದ, ತಕ್ಕ ಮಾರ್ಗಾನುಕೂಲಗಳಿಲ್ಲದ ಕಾಲದಲ್ಲಿಯೂ ಕೂಡ, ಈ ಖಂಡಗಳ ಅತ್ಯಂತ ಸಾಹಸಿಗರಾಗಿದ್ದ ವಿಚಾರಪರರು ಜ್ಞಾನಾರ್ಜನೆಗಾಗಿ ಪ್ರವಾಸಗಳನ್ನು ಕೈಗೊಂಡಿದ್ದರು. ಬೇರೆ ಬೇರೆ ದೇಶಗಳ ಮಹಾ ಕಲ್ಪನೆಗಳನ್ನು ಗ್ರಹಿಸಿಕೊಂಡು ತಮ್ಮ ವಿಚಾರಗಳಿಗೆ ಕೂಡಿಸಿಕೊಂಡರು. ಒಮ್ಮೆ ಚೀಣಾ ದೇಶದಿಂದ ಮಧ್ಯಪ್ರಾಚ್ಯದ ವರೆಗೆ ವಿಸ್ತರಿಸಿದ್ದ ರೇಶಿಮೆಯ ಮಾರ್ಗವು, ತಮ್ಮ ಸಂಶೋಧನೆಗಳಿಗಾಗಿಯೇ ಪ್ರಯಾಣ ನಿರತರಾಗಿದ್ದ ದಾರ್ಶನಿಕರಿಗೂ, ಕವಿಗಳಿಗೂ, ಕಲಾವಿದರಿಗೂ, ವ್ಯಾಪಾರಿಗಳಿಗೂ ಆಶ್ರಯ ಕೊಟ್ಟಿತ್ತು. ಭಾರತ ದೇಶದ ಕರಾವಳಿ ಪ್ರದೇಶದಿಂದ ಆಗ್ನೇಯ ಏಶೀಯಾ, ದೂರ ಪ್ರಾಚ್ಯಗಳಿಗೂ, ಹಾಗೂ ಈಜಿಪ್ಟ್, ಗ್ರೀಸ್, ರೋಮ್ ದೇಶಗಳಿಗೂ ಸ್ಥಳೀಯ ಹಡಗುಗಳು ಹೋಗುತ್ತಿದ್ದುವು. ಪ್ರಗಾಢ ಸತ್ಯಗಳೂ, ಕಲ್ಪಿತ ಕತೆಗಳೂ ಮತ್ತು ಕುಶಲ ಕೈಗಾರಿಕೆಗಳೂ ಅಲ್ಲಿಂದ ಈ ನೌಕೆಗಳ ಮೇಲೆಯೆ ಸಾಗಿ ಬಂದುವು. ಇರಾನಿನಿಂದ ಆಫ್ಘಾನಿಸ್ತಾನಕ್ಕೂ ಮಧ್ಯಏಶಿಯಾ, ಹಿಮಾಲಯ ಪರ್ವತಗಳ ಕಡೆಗೆ ಸಾಗುತ್ತಿದ್ದ ಮಾರ್ಗದ ಮೇಲೆ ಯಾತ್ರಿಕರ ಸಂತತ ಪ್ರವಾಹ ಚಲಿಸುತ್ತಿತ್ತು. ಈಗ ಅತ್ಯಂತ ವೇಗವಾದ ಸಂಪರ್ಕ ಸಾಧನಗಳು ಇವೆಯಾದುದರಿಂದ, ಏಶಿಯಾ-ಆಫ್ರಿಕಾ ದೇಶಗಳ ಲೇಖಕರಿಗಿರುವ, ಒಂದೆಡೆ ಒಟ್ಟಿಗೆ ಸೇರಬೇಕೆಂಬ, ಗಾಢವಾದ ಇಚ್ಛೆಯನ್ನು ಹೆಚ್ಚು ಸುಲಭವಾಗಿ ಈಡೇರಿಸಿಕೊಳ್ಳಲು ಸಾಧ್ಯವಿದೆ.

1956ರಲ್ಲಿ ದಿಲ್ಲಿಯಲ್ಲಿ ನಡೆದ ಏಶಿಯ ಲೇಖಕರ ಸಮ್ಮೇಲನದಲ್ಲಿ ಏಶಿಯದ ಮೇಧಾವಿಗಳನೇಕರು ಒಂದೆಡೆ ಕೂಡಿದ್ದು ಸಮಾಚಾರದ ಮುಖ್ಯ ವಿಚಾರಗಳು—ಹಲವು ವೇಳೆ ಪರಸ್ಪರ ಭಿನ್ನವಾದವುಗಳು—ವಿನಿಮಯವನ್ನು ಮಾಡಿಕೊಂಡರು. ಭಿನ್ನ ವಿಚಾರಗಳಿದ್ದಾಗ್ಯೂ ಸ್ನೇಹ ಬಂಧನಗಳನ್ನು ಕಂಡುಕೊಂಡರು.

ದಿಲ್ಲಿಯಲ್ಲಿನಂತೆಯೇ, ಈಗಲೂ ಕೂಡ ಯಾರನ್ನೂ ಹೊರಪಡಿಸಕೂಡದೆಂಬುದೇ ನಿಯೋಜಕರ ಬಯಕೆ. ಆದುದರಿಂದಲೇ, ಯೂರೋಪ್, ಅಮೆರಿಕಾ, ಆಸ್ಟ್ರೇಲಿಯಾ ಖಂಡಗಳ ಲೇಖಕರನ್ನೂ ಸಮೀಕ್ಷಕರೆಂದು ಈ ಸಮ್ಮೇಲನಕ್ಕೆ ಆಹ್ವಾನಿಸಲಾಗುವುದು.

ಸಾಧಾರಣತಃ ಪಾಶ್ಚಿಮಾತ್ಯ ಪ್ರಪಂಚವೆನ್ನಬಹುದಾದ ದೇಶಗಳಿಗೆ ಏಶಿಯಾ ಆಫ್ರಿಕಾಗಳನ್ನು ವಿರೋಧಗೊಳಿಸದಿರಬೇಕೆಂಬುದೂ, ಯೂರೋಪಿನ ಹೊಸ ಬಾಳಿನ ಭಾವನೆಯೊಂದಿಗೆ ಏಶಿಯಾ—ಆಫ್ರಿಕಾ ನಾಗರಿಕತೆಗಳ ಸತ್ಯಗಳನ್ನು ತಿಳಿಸುವುದರಸಲುವಾಗಿ ಏಶಿಯಾದ, ಆಫ್ರಿಕದ ಮತ್ತು ಪಾಶ್ಚಿಮಾತ್ಯ ಖಂಡದ ಲೇಖಕರನ್ನು ಒಟ್ಟುಗೂಡಿಸುವುದಕ್ಕಾಗಿ ಸುಸಂದರ್ಭಗಳನ್ನು ನಿರ್ಮಿಸಬೇಕೆಂಬುದೂ, ಈಗ ಬಯಸಲಾಗುತ್ತಿರುವ ವಿಷಯವಾಗಿದೆ.

ಪ್ರಪಂಚದ ಲೇಖಕರು ಮಾನವನ ಆತ್ಮಸಾಕ್ಷಿಗಳ ಮತ್ತು ಅವರ ಸೃಷ್ಟ್ಯಾತ್ಮಕ ಕೃತಿಗಳ ಗಾಢ ತಿಳುವಳಿಕೆಯ ಮೂಲಕ, ಸ್ನೇಹದ ಮತ್ತು ಪರಸ್ಪರ ಸಾಮರಸ್ಯದ ಮನೋಭಾವನೆಯಲ್ಲಿ, ಮಾನವ

ಕೋಟಿಯ ಮಧ್
ಯನ್ನು ನೀಡಬ
ಸಾಧಾರಣ ಮನ
ಕರು ಪ್ರಪಂಚದ
ಷವನ್ನೂ ನಿವಾರಿ

ಈ ರೀತಿಯಲ್ಲಿ,
ವ ಈ ಯುಗದಲ್ಲಿ
ಸಮಸ್ಯೆಗಳ ಬಗ್ಗೆ
ದೃಷ್ಟಿಯನ್ನು ನಿ
[illegible]ಯ ಪ್ರ
ಗಳನ್ನು ನಾಶಪಡಿ

ಏಷಿಯದ ಮ
ರೆಲ್ಲರೂ ಈ ಮನ
ಆಯಾ ದೇಶಗಳ
ವಹಿಸುತ್ತ, ತಾಷ್
ಏಶಿಯಾ ಆಫ್ರಿಕ
ಸಮ್ಮೇಲನದ ಸ
ಸಿದ್ಧತಾ ಕಾರ್ಯ
ದು ಭಾವೀ ಸಮ
ತಿಯು ಏಶಿಯಾ
ಕರೆ ಕೊಟ್ಟಿದೆ.

ಈ ಮನವಿಗೆ
ಎಲ್ಸ್‌ಬಾಯ್,
ದೀನ್ (ಸಂಯು
ಷರಾಫ್ ರಾಷಿ
ಕೋರ್ನವ್, ಅ
ಸ್ಕಿ (ಸೋವಿಯ
ತ್ಸಲಿನ್, ಯಾ
ಜನತಾ ರಾಜ್ಯ)
ಮತ್ತು ಮುಲ್ಕ
ಗಣತಂತ್ರ) ಹ
(ಜಪಾನ್) ಇವ
ವರು.

ಅಮೆರಿಕಾ—ಇದೀಗ ದಾರಿ ಕೊಟ್ಟಿತು !

ಖ್ಯಾತ ನಿಗ್ರೋ ಗಾಯಕ ಪಾಲ್ ರೊಬ್ಸನ್ ಭಾರತಕ್ಕೆ ಬರಬಹುದು

ಅಮೆರಿಕೆಯ ಸುಪ್ರೀಮ್ ಕೋರ್ಟಿನ ಜೂನ್ 16ರ ತೀರ್ಪಿನಂತೆ ಅಮೇರಿಕೆಯ ರಾಜ್ಯ ಶಾಖೆಯು ಅರ್ಜಿದಾರನ 'ನಂಬುಗೆ' ಅಥವಾ 'ಸಾಹಚರ್ಯ'ಗಳ ಕಾರಣದಿಂದ ತಿರಸ್ಕರಿಸಲ್ಪಡುತ್ತಿದ್ದ 'ರಹದಾರಿ'ಗಳನ್ನು ಪ್ರಥಮ ಬಾರಿಯಾಗಿ ಇದೀಗ ಕೆಲವರಿಗೆ ಕೊಡಲಿದೆ.

★ ಇಂಥ ಮೊದಲ ವೀಸಾ ಕಾಸ್ಮಿಕ್ ಕಿರಣ ವಿಜ್ಞಾನಿಯಾದ ವೆಲ್ಡ್ ಬ್ರೂಸ್ ಡೇಟನ್ ಅವರಿಗೆ ದೊರೆತಿದೆ. ಡೇಟನ್‌ರು ಈಗ ನಾಲ್ಕು ವರ್ಷಗಳ ಕಾಲದಿಂದ ರಹದಾರಿಗಾಗಿ ಕಾನೂನುಬದ್ಧವಾಗಿ ಹೋರಾಡುತ್ತಿದ್ದರು. ಭಾರತದಲ್ಲಿಯ ತಾತಾ ಇನ್‌ಸ್ಟಿಟ್ಯೂಟ್ ಆಫ್ ಫಂಡಾಮೆಂಟಲ್ ರೀಸರ್ಚ್ ಸಂಸ್ಥೆಯಲ್ಲಿ ಹುದ್ದೆಯೊಂದನ್ನು ಸ್ವೀಕರಿಸಲು ಹಾಗೂ ಭಾರತಕ್ಕೆ ಬರಲು ಹಾತೊರೆಯುತ್ತಿದ್ದ ಡೇಟನ್ ತಮ್ಮ ಮೇಲೆ ಮಾಡಲಾಗಿದ್ದ ಕಮ್ಯೂನಿಸ್ಟ್ ಪಕ್ಷದ ಸದಸ್ಯ ಎಂಬುದನ್ನು ಖಂಡತುಂಡಾಗಿ ಅಲ್ಲಗಳೆದರು. ತಾವೆಂದೂ ಆ ಪಕ್ಷದ ಸದಸ್ಯರಾಗಿಲ್ಲವೆಂದು ಹೇಳಿದರು.

★ ಸುಪ್ರೀಮ್ ಕೋರ್ಟಿನ ತೀರ್ಪಿನ ಪ್ರಕಾರ ಈಗ ರಾಜ್ಯ ಸರ್ಕಾರ ಶಾಖೆಯು ಪ್ರಖ್ಯಾತ ನಿಗ್ರೋ ಗಾಯಕ ಪಾಲ್ ರೋಬ್ಸನ್‌ರವರಿಗೂ ರಹದಾರಿ ಕೊಡಬೇಕಾಗುತ್ತದೆ. ಕಮ್ಯೂನಿಸ್ಟ್ ಉದ್ದೇಶಗಳಿಗೆ ಆಗಾಗ ಅವರು ಸಂಬಂಧಪಟ್ಟಿರುವ ಕಾರಣ ತೋರಿಸಿ ಹಲವಾರು ವರುಷಗಳಿಂದ ಅವರಿಗೆ ವೀಸಾ ತಿರಸ್ಕರಿಸಲಾಗಿದೆ.

ಪಾಲ್ ರೋಬ್ಸನರು ತುಂಬಾ ದಿನಗಳಿಂದ ಭಾರತಕ್ಕೆ ಬರಬೇಕೆಂದು ಅಪೇಕ್ಷಿಸುತ್ತಲೇ ಬಂದಿದ್ದಾರೆ. ಇತ್ತೀಚೆಗೆ ಭಾರತದಲ್ಲಿ ಅವರ ೬೦ನೆಯ ಜನ್ಮದಿನೋತ್ಸವವನ್ನು ಆಚರಿಸಿದಾಗ ಭಾರತಕ್ಕೆ ಭೇಟಿ ಕೊಡಲು ಅವರನ್ನು ಆಮಂತ್ರಿಸಲಾಯಿತು. "ಖಂಡಿತ ಒಮ್ಮೆ ಬರುವೆ" ಎಂದಿದ್ದ ಅವರ ಆಶೆ ಇದೀಗ ಕೈಗೂಡುವಂತಿದೆ. ಅವರು ಈ ವರುಷ ಇಲ್ಲವೆ 1959ರಲ್ಲಾದರೂ ಭಾರತಕ್ಕೆ ಬಂದೇ ಬರಬಹುದಾಗಿದೆ. ಈ ನಿಗ್ರೋ ಜನಗಾಯಕನ ಗೀತಗಳನ್ನು ಕೇಳುವ ಭಾಗ್ಯ ಭಾರತೀಯರಿಗೆ ಹತ್ತಿರವಾಗಿದೆ.

★ ಕಲಾವಿದ ರಾಕ್‌ವೆಲ್ ಕೆಂಟ್ ಮತ್ತು ಮನೋವಿಜ್ಞಾನಿ ವಾಲ್ಟರ್ ಬ್ರೀಲ್ ಅವರುಗಳಿಗೂ ವೀಸಾ ದೊರಿಯಲಿದೆ.

ಕೆಂಟ್ ಮತ್ತು ಬ್ರೀಲ್ ಅವರುಗಳು 'ಕಮ್ಯೂನಿಸ್ಟೇತರ' ಎಂಬ ಪ್ರಮಾಣಕ್ಕೆ ರುಜು ಹಾಕಲು ತಿರಸ್ಕರಿಸಿದುದರಿಂದ ಅವರಿಗೆ ವೀಸಾ ತಿರಸ್ಕರಿಸಲಾಗಿತ್ತು. ರಾಜ್ಯ ಶಾಖೆಗೆ ಇಂಥವನ್ನೆಲ್ಲ ಪ್ರಶ್ನಿಸಲು ಏನೇನೂ ಅಧಿಕಾರವೇ ಇಲ್ಲವೆಂಬುದು ಇವರ ವಾದವಾಗಿತ್ತು.

ಸುಪ್ರೀಮ್ ಕೋರ್ಟ್ ಇದೀಗ ಇತ್ತಿರುವ ತನ್ನ ತೀರ್ಪಿನಲ್ಲಿ ರಾಜ್ಯ ಶಾಖೆಗೆ ಅರ್ಜಿದಾರನ 'ನಂಬಿಕೆ' ಅಥವಾ 'ಒಡನಾಟ'ಗಳ ಕಾರಣದಿಂದ ವೀಸಾಗಳನ್ನು ತಿರಸ್ಕರಿಸಲು ಅಧಿಕಾರವೇ ಇಲ್ಲ ಎಂದು ತಿಳಿಸಿದೆ.

ರ

ಭಾರತ ಸ
ಗಾರಿಕೆಗಳಲ್ಲೊ
ದುಸ್ತಾನ್ ಮ
ನೇಜ್‌ಮೆಂಟಿನ
ರ್ಮಿಕರು ಪಾತ್ರ
ನ್ನು ಜಾರಿಗೆ ತ
ಯೋಜನೆಯ
ಲಿ (ಕೌನ್ಸಿಲ್
ಟ್) ರಚಿಸಿ
ಗಳಿಗೂ, ಮ್ಯಾ
ವು ಪ್ರಾತಿನಿಧ್ಯ

ಈ ಆಡಳಿತ
ಬ್ಧಾಂಗಳಿವೆ,
ವಿಗೂ ಕಾನೂ
ಟ ಇದ್ದು ಕೆಲ
ಸಿ ಮ್ಯಾನೇಜ್
ತ್ತಿತ್ತು. ಆ
ಲ್ಲಿಗೆ ವರ್ಕ್ಸ್
ಕಾರಗಳನ್ನು
ಹೆಚ್ಚಿಸಲು ಕೈ
ವುಗಳು,

...ಳನ

...ತ್ಯಕ್ಕೆ ಒತ್ತಾಸೆ
...ವಾಸ್ತವಾಂಶಕ್ಕೆ
...ಿಸಿದೆ. ಲೇಖ
...ಯನ್ನೂ, ದ್ವೇ

...ಭರಿತವಾಗಿರು
...ರ ಸಂಬಂಧಗಳ
...ು ತಮ್ಮ ಅಂತ
..., ಮತ್ತು ಅಂ
...ತಿಯ ಮೂಲ

...ಕದ ಲೇಖಕ
...ಟ್ಟು, ತಮ್ಮ
...ು ಪಾತ್ರವನ್ನು
...ನಡೆಯಲಿರುವ
...ಕರ ದ್ವಿತೀಯ
...ಡೆಯಬೇಕಾದ
...ಗಳಾಗಬೇಕೆಂ
...ಸಿದ್ಧತಾ ಸಮಿ
...ಾ ಲೇಖಕರಿಗೆ

...ದ ಯುಸೂಫ್
...ಸಾದ್ ಎಲ್
... ಗಣತಂತ್ರ),
... ಅಲೆಕ್ಸಿ ಸು
... ಜಾಕೋವ್
...), ಜಿ-ಬಾವೊ
...ಪೋ (ಚೀನಾ
...ರ್ ಬ್ಯಾನರ್ಜಿ
...ಂಡ್ (ಭಾರತ
...ೀಸಿ ಹೊಟ್ಟಾ
...ಂಕಿತ ಹಾಕಿರು

ಸ್ಪುಟ್ನಿಕ್ ಕತೆ — ೧

ತೃತೀಯ ಉಪಗ್ರಹದಿಂದ ಸುದ್ದಿ ಹೇಗೆ ಬರುತ್ತಿದೆ ?

ತೃತೀಯ ಸೋವಿಯತ್ ಉಪಗ್ರಹವನ್ನು ಹಾರಿಸಿ ಈಗಾಗಲೇ ಐದು ವಾರಗಳು ಸಂದಿವೆ. ವಿಸ್ತೃತ ಕಾರ್ಯಕ್ರಮದ ಪ್ರಕಾರ ಅಮೂಲ್ಯ ವೈಜ್ಞಾನಿಕ ಆಧಾರಾಂಶಗಳನ್ನು ಸಂಗ್ರಹಿಸಲಾಗುತ್ತಿದೆ. ತೃತೀಯ ಉಪಗ್ರಹದಲ್ಲಿರುವ ಯಂತ್ರಸಾಧನಗಳೆಲ್ಲವೂ ಚೆನ್ನಾಗಿ ಕೆಲಸ ಮಾಡುತ್ತಿವೆ.

ಉಪಗ್ರಹದ ಪಥದ ವಿಷಯವಾಗಿಯೂ, ಅದರ ಕೆಲ ವ್ಯತ್ಯಾಸಗಳ ಬಗ್ಗೆಯೂ ದೊರೆಯುತ್ತಿರುವ ಕರಾರುವಾಕ್ಕಾದ ವಾಸ್ತವಾಂಶಗಳು, ಉಪಗ್ರಹದ ವೈಜ್ಞಾನಿಕ ಸಮೀಕ್ಷೆಗಳೆಲ್ಲವನ್ನೂ ಭೌಗೋಳಿಕವಾಗಿ ಸ್ಥಾನ ನಿರ್ದೇಶಗೊಳಿಸುವುದು ಮಾತ್ರವಷ್ಟೇ ಅಲ್ಲದೆ, ಭೂಭೌತ ಸಂಶೋಧನೆಗಾಗಿಯೂ ತುಂಬಾ ಅಮೂಲ್ಯ ವಿಷಯಗಳನ್ನು ನೀಡುವುದು. ಉಪಗ್ರಹವು ವೈಜ್ಞಾನಿಕ ಸಮಾಚಾರವನ್ನು ಒದಗಿಸುತ್ತಲೇ ಇದೆ.

ಅದರ 'ಮಯಾಕ್' (ಸಮುದ್ರದೀಪಾಲಯ) ನಿಸ್ತಂತು ವಾರ್ತಾ ಪ್ರೇಕ್ಷಕ ಯಂತ್ರವು ನಿರಂತರವಾಗಿ ಕೆಲಸ ಮಾಡುತ್ತಿದ್ದು ೨೦ ೦೦೫ ಮೇಗಾಸೈಕಲ್‌ಗಳ ಕಂಪನದ ಮೇಲೆ ತಂತಿ—ಸಮಾಚಾರವನ್ನು ಕಳಿಸುತ್ತಲೇ ಇದೆ. ಸೌರವಿದ್ಯುತ್ಕೋಶಗಳಿಂದಲೂ, ಉಪಗ್ರಹವು ಭೂಮಿಯ ನೆರಳಿನ ಕಡೆ ಹಾರುತ್ತಿರುವಾಗ ವಿದ್ಯುತ್ ರಾಸಾಯನಿಕ ಕೋಶಗಳಿಂದಲೂ, ಈ ಪ್ರೇಕ್ಷಕ ಯಂತ್ರಕ್ಕೆ ಚೇತನವು ದೊರೆಯುತ್ತದೆ.

ತಂತಿ ಸುದ್ದಿ ಸಂಜ್ಞೆಗಳ ಲಂಬತೆಯನ್ನು ಬದಲಾಯಿಸುವುದರ ಮೂಲಕ, ಸೌರವಿದ್ಯುತ್ಕೋಶ ಶ್ರೇಣಿಗಳ ಚಲಾವಣೆಯ ಬಗ್ಗೆಯೂ, ವಿಶ್ವಕಣಗಳ ಮತ್ತು 'ಫೋಟೋಸ್'ಗಳ ಮೊತ್ತದ ಬಗ್ಗೆಯೂ, ಸಮಾಚಾರವು ಬರುತ್ತದೆ. ಈ ಸಂಕೇತಗಳನ್ನು ಈ ಕೆಳಗೆ ತಿಳಿಸಿದಂತೆ ಗ್ರಹಿಸಿಕೊಳ್ಳಲಾಗುತ್ತದೆ. ಬಾನುಲಿ ಪ್ರೇಷಕಯಂತ್ರಕ್ಕೆ ಸೌರ ವಿದ್ಯುತ್ಕೋಶ ಶ್ರೇಣಿಗಳಿಂದ ಚೇತನವು ದೊರೆಯುತ್ತಿರುವಾಗ, ಮೂರು 300 ಮಿಲ್ಲಿ ಸೆಕಂಡುಗಳ ಗುರುತಿನ ಸಂಕೇತದ ತರುವಾಯದ ಮೊದಲನೆಯ ತಂತಿ ಸಂಜ್ಞೆಯ ಉದ್ದವು 150 ಮಿಲ್ಲಿ ಸೆಕೆಂಡುಗಳಷ್ಟಿರುತ್ತದೆ. ನಿಸ್ತಂತು ಪ್ರೇಷಕ ಯಂತ್ರವು ವಿದ್ಯುತ್ ರಾಸಾಯನಿಕ ಕೋಶ ಶ್ರೇಣಿಗಳಿಂದ ನಡೆಯುತ್ತಿರುವಾಗ ಈ ಸಂಕೇತವು 50 ಮಿಲ್ಲಿ ಸೆಕಂಡುಗಳಷ್ಟೇ ಉದ್ದವಾಗಿರುತ್ತದೆ.

ಪ್ರಕಾಶ ಪ್ರಜ್ವಲಿತ ವಿಶ್ವಕಿರಣ ಗಣನೆ ಯಂತ್ರದ ನೋಂದಾವಣೆಗಳನ್ನೂ-ಎರಡನೆಯ ಮತ್ತು ಮೂರನೆಯ (ಕಡೆಯ) ಸಂಕೇತವನ್ನು 150 ಮಿಲ್ಲಿ ಸೆಕಂಡುಗಳಿಂದ 100 ಅಥವಾ 50 ಮಿಲ್ಲಿ ಸೆಕಂಡುಗಳಿಗೆ ಎಂಬತೆಯಲ್ಲಿ ಬದಲಾಯಿಸುವುದರ ಮೂಲಕ ಪ್ರೇಷಿತಗೊಳಿಸಲಾಗುತ್ತದೆ. ನೋಂದಾವಣೆಯಾದ ಕಣಗಳ ಸಂಖ್ಯೆಯನ್ನನುಸರಿಸಿಕೊಂಡು, ಬೇರೆ ಬೇರೆ ಉದ್ದಗಳ ಸಂಕೇತಗಳು ಪ್ರಾರಂಭವಾಗುವುದನ್ನು ವಿದ್ಯುತ್ಪ್ರವಾಹ ಬಲವರ್ಧಕ ವ್ಯವ

(೬ನೇ ಪುಟ ನೋಡಿ)

...ಂದುಸ್ತಾನ್ ಮೆಷಿನ್‌ಟೂಲ್ಸ್ ಮ್ಯಾನೇಜ್‌ಮೆಂಟ್:

...ಕರಿಗೂ ಇದರಲ್ಲಿ ಸಮಪ್ರಾತಿನಿಧ್ಯ

...ಸುತ್ತಿರುವ ಕೈ
...ಗಳೂರಿನ ಹಿಂ
...್ಸನಲ್ಲಿ ಮ್ಯಾ
...ಬಾರಿಗೆ ಕಾ
...ಯೋಜನೆಯ
...ಸಲಾಗಿದೆ. ಈ
...ಡಳಿತ ಮಂಡ
...್ಯಾನೇಜ್‌ಮೆಂ
...ಕರರ ಪ್ರತಿನಿಧಿ
...ಚಿನವರಿಗೂ ಸ
...ುವುದು.
...ಅನೇಕ ಜವಾ
...ೆ. ಇದುವರೆ
...ವರ್ಕ್ಸ್ ಕಮಿ
...ಗಳನ್ನು ಚರ್ಚೆ
...ಲಹೆ ಈಯು
...ಮವ ಕೌನ್ಸಿ
... ಹೆಚ್ಚಿನ ಅಧಿ
...ದು, ಉತ್ಪತ್ತಿ
...ದ ಕಾರ್ಯಕ್ರ
...ಂಟಿನಲ್ಲಿರುವ

ನ್ಯೂನ್ಯತೆಗಳು, ಕಾರ್ಮಿಕರ ದುಡಿಯುವ ಮತ್ತು ಜೀವಿಸುವ ಸ್ಥಿತಿಗತಿಗಳು, ಮಾರುಕಟ್ಟೆಯ ಸ್ಥಿತಿಗಳು, ಆರ್ಥಿಕ ಪರಿಸ್ಥಿತಿ, ಮಾರಾಟದ ವಿಧಾನ ಇತ್ಯಾದಿಗಳ ಬಗ್ಗೆ ಕೌನ್ಸಿಲ್ಲು ಸಲಹೆ ನೀಡುತ್ತದೆ. ಮತ್ತು ಕಾರ್ಮಿಕರು ಸೂಚಿಸುವ ನೂತನ ವಿಧಾನಗಳಿಗೆ ಬಹುಮಾನ ಕೊಡುವುದು, ಟ್ರೈನಿಂಗ್ ಮತ್ತು ಅಪ್ರೆಂಟಿಸ್‌ಗಳ ವಿಷಯ, ಫ್ಯಾಕ್ಟರಿ ಒಳಗಡೆ ಕಾರ್ಮಿಕರಿಗೆ ಅನ್ವಯಿಸುವ ರಕ್ಷಣಾ ಪದ್ಧತಿಗಳು, ಇತ್ಯಾದಿ ವಿಷಯಗಳ ಬಗ್ಗೆ ಕೌನ್ಸಿಲ್ಲು ಉಸ್ತುವಾರಿ ನಡೆಸಲು ಹಕ್ಕಿದೆ. ಮತ್ತು ಕಂಪೆನಿಯ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಎಲ್ಲ ರೀತಿಯ ಅಂಕಿಅಂಶಗಳನ್ನು ಪಡೆಯಲು ಹಕ್ಕಿದೆ.

ಮೇಲಿನ ಕೆಲವು ಮುಖ್ಯ ಕರ್ತವ್ಯಗಳನ್ನು ಕೌನ್ಸಿಲ್ ನಿರ್ವಹಿಸಿದರೂ ಸಹ, ಇದರಿಂದಾಗಿ ಕಾರ್ಮಿಕ ಸಂಘದ ಹಕ್ಕುಗಳನ್ನು ಕಸಿದುಕೊಳ್ಳಲಾಗುವುದಿಲ್ಲ. ಮತ್ತು ಆಡಳಿತ ವರ್ಗದ ಹಕ್ಕುಗಳೂ ಹಾಗೆಯೇ ಉಳಿಯುತ್ತವೆ. ಕಾರ್ಮಿಕರಿಗೆ ಸಂಬಂಧಪಟ್ಟ ಕೂಲಿ, ತುಟ್ಟಿ ಭತ್ಯ ಇತ್ಯಾದಿ ವಿಷಯಗಳನ್ನು ಸಂಘವು ಆಡಳಿತ ವರ್ಗದ ಮುಂದಿಟ್ಟು ತನ್ನ ಬಲದಿಂದ ಪಡೆಯಬೇಕಾಗಿದೆ. ಮತ್ತು ಆಡಳಿತ ಮಂಡಲಿಯು ಹೆಚ್ಚಾಗಿ ಸಲಹಾ ಮಂಡಲಿಯಾಗಿರುವುದರಿಂದ ಬಲಿಷ್ಠವಾದ ಸಂಘವಿಲ್ಲದಿದ್ದಲ್ಲಿ ಮ್ಯಾನೇಜ್‌ಮೆಂಟಿನವರು ಸಲಹೆಗಳನ್ನು ಒಪ್ಪಿಕೊಳ್ಳುವುದು ಸುಲಭವಲ್ಲ. ಕಾರ್ಮಿಕ ಸಂಘಕ್ಕೂ, ಆಡಳಿತ ಕೌನ್ಸಿಲ್ಲಿಗೂ ನಿಕಟ ಸಂಪರ್ಕವು ಇಂತಹ ಪರಿಸ್ಥಿತಿಯಲ್ಲಿ ಅತ್ಯಾವಶ್ಯಕವಾಗುತ್ತದೆ.

ನೌಕರರ ಮುಂದಿರುವ ಗುರುತರ ಜವಾಬ್ದಾರಿಗಳನ್ನೂ, ಕರ್ತವ್ಯಗಳನ್ನೂ ಅರಿತು, ಅವುಗಳ ಬಗ್ಗೆ ತಾ. 22—6—58 ರಂದು ಸೇರಿದ್ದ ವಿಶೇಷ ವರ್ಷಸದಸ್ಯರ ಸಭೆಯಲ್ಲಿ, ಹಿಂದುಸ್ಥಾನ್ ಮೆಷಿನ್ ಟೂಲ್ಸ್ ಕೆಲಸಗಾರರ ಸಂಘದ ಅಧಿಕಾರಿ ವರ್ಗದವರನ್ನು ನೌಕರರು ಕೌನ್ಸಿಲ್ ಆಫ್ ಮ್ಯಾನೇಜ್‌ಮೆಂಟಿಗೆ ಆರಿಸಿದ್ದಾರೆ. ಈ ಕಾರ್ಮಿಕರ ಪ್ರತಿನಿಧಿಗಳಾಗಿ ಶ್ರೀ ಎಂ.

(೬ನೇ ಪುಟ ನೋಡಿ)

ನೀವೇನು ಹೇಳುತ್ತೀರಿ ?

ಭಾರತ ದೇಶದ ಆರ್ಥಿಕ ಹಾಗೂ ರಾಜಕೀಯ ಸ್ಥಿತಿಗತಿಗಳ ಮೇಲೆ ಪರಿಣಾಮ ಮಾಡುವ ಶಕ್ತಿಗಳು ಎಲ್ಲಿವೆ ? ಹೆಚ್ಚು ಹೆಚ್ಚು ಹದಗೆಡಿವ ಈ ಸ್ಥಿತಿಗತಿಗೆ ಕಾರಣವೇನು ? ಪ್ರಮುಖ ಔದ್ಯೋಗಿಕ ಕ್ಷೇತ್ರಗಳಲ್ಲಿ "ಸಂಬಂಧಿ"ಗಳ ಪ್ರಭಾವಕಾರಿ ಪಾತ್ರ ಹೇಗೆ ಸಾಗಿದೆ ? ಅದಿರಲಿ ಬಿಡಿ, ಕೊಂಚ "ಸಂಬಂಧಿ"ಗಳ ಸಮಾಚಾರವನ್ನೂ ಸರಮಾಲೆಯನ್ನೂ ಇಲ್ಲಿ ನೋಡೋಣ :

● ವಿದೇಶಾಂಗ ವ್ಯವಹಾರ ಶಾಖೆಯ ಸೆಕ್ರೆಟರಿ ಜನರಲ್ ಸರ್ ಎನ್. ಆರ್. ಪಿಳ್ಳೆ. ವಿದೇಶಿ ಅತಿಥಿಗಳಿಗೆಲ್ಲ ಆಗಾಗ ಅತಿಥೇಯರಾಗಿರುವವರು ಇವರೆ. ಇವರ 20 ವರುಷದ ಮಗನಿಗೆ ಬ್ರಿಟಿಷ್ ಒಡೆತನದಲ್ಲಿರುವ ಚಾ ತೋಟಗಳ ಕಂಪೆನಿಯಲ್ಲಿ ದೊಡ್ಡ ಕೆಲಸವನ್ನು ಪಡೆಯಲಾಯಿತು. ಹುಡುಗನ ಅರ್ಹತೆಯೆಂದರೆ-ಚರ್ಮವೊಂದನ್ನು ಬಿಟ್ಟರೆ ಭಾರತೀಯನೆಂದು ಹೇಳುವಂತೆಯೇ ಇಲ್ಲ. ಬೆಳೆದುದು ಇಂಗ್ಲಂಡಿನಲ್ಲಿ. ಭಾರತದ ಯಾವ ಭಾಷೆಯೂ ಈ ಮಗುವಿಗೆ ಬರುವದಿಲ್ಲ !

● ಗೃಹಶಾಖೆಯ ವಿಶೇಷ ಕಾರ್ಯದರ್ಶಿಯಾದ ವಿ. ವಿಶ್ವನಾಥನ್ ಐ.ಸಿ.ಎಸ್. ಅವರು ತಮ್ಮ ಮಗನಿಗೆ ದೊಡ್ಡದೊಂದು ಬ್ರಿಟಿಷ್ ವಾಣಿಜ್ಯ ಸಂಸ್ಥೆಯಲ್ಲಿ ಕೆಲಸ ಪಡೆದಿದ್ದಾರೆ.

● ವಿದೇಶಾಂಗ ಕಾರ್ಯದರ್ಶಿ ಎಸ್. ದತ್ತ ಐ. ಸಿ. ಎಸ್. ಅವರು ತಮ್ಮ ಅಳಿಯ ಮತ್ತು ಭಾವಮೈದುನ ಅವರಿಗೆ ಬರ್ಡ್ ಅಂಡ್ ಕೋ.ನಲ್ಲಿ ಕೆಲಸ ಕೊಡಿಸಿದ್ದಾರೆ.

● ರಿಸರ್ವ್ ಬ್ಯಾಂಕ್ ಗವರ್ನರ್‌ರಾದ ಹೆಚ್. ವಿ. ಆರ್. ಐಯಂಗಾರ ಐ.ಸಿ.ಎಸ್. ಅವರ ಪುತ್ರ ರಾಮಪ್ರಸಾದ ಐಯಂಗಾರ್ ಬರ್ಮಾಷೆಲ್‌ನಲ್ಲಿ ದೊಡ್ಡ ಹುದ್ದೆಯಲ್ಲಿರುವರು.

● ಸಂಪುಟದ ಕಾರ್ಯದರ್ಶಿ ಶ್ರೀ ವಿಷ್ಣು ಸಹಾಯ್ ಐ ಸಿ ಎಸ್. ಅವರ ಕುಮಾರ ಕಾಲ್ಟೆಕ್ಸ್‌ನಲ್ಲಿ ದೊಡ್ಡ ಹುದ್ದೆಯಲ್ಲಿರುವರು.

● ಆಡಿಟರ್ ಜನರಲ್‌ರಾದ ಅಶೋಕ್ ಚಾಂದಾ ಅವರ ಅಳಿಯ ಕೂಡ ಬರ್ಮಾಷೆಲ್‌ನಲ್ಲಿ ಅಂಥದೇ ಹುದ್ದೆಯಲ್ಲಿ ಸುಖವಾಗಿರುವರು.

● ಸ್ಟೇಟ್‌ಬ್ಯಾಂಕ್ ಅಧ್ಯಕ್ಷರಾದ ಶ್ರೀ ಪಿ. ಸಿ. ಭಟ್ಟಾಚಾರ್ ಅವರ ಅಳಿಯ ಬ್ರಿಟಿಷ್ ಒಡೆತನದ ಕಲ್ಕತ್ತಾ ವಿದ್ಯುತ್ ಸರಬರಾಜು ಕಂಪೆನಿಯಲ್ಲಿ ದೊಡ್ಡ ಕೆಲಸದ ಮೇಲಿರುವರು.

● ಕರಾಚಿಯಲ್ಲಿ ಭಾರತದ ರಾಯಭಾರಿಯಾಗಿರುವ ಸಿ. ಸಿ. ದೇಸಾಯಿ ಅವರ ಪುತ್ರ ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್‌ನಲ್ಲಿ (I.C.I) ಅಭಿವೃದ್ಧಿಗೊಳ್ಳುತ್ತಿದ್ದಾರೆ.

ರೂರ್ಕೆಲಾ ಕಬ್ಬಿಣ ಮತ್ತು ಉಕ್ಕು ಸ್ಥಾವರದ ಜನರಲ್ ಮ್ಯಾನೇಜರ್‌ರಾದ ಸಿ. ಜಿ. ಭಗತ್ ಅವರು ತಮ್ಮ ಮಗನಿಗೆ ಬರ್ಡ್ ಅಂಡ್ ಕೋ.ನಲ್ಲಿ ಉನ್ನತ ಸಂಬಳದ ನೌಕರಿ ದೊರಕಿಸಿದ್ದಾರೆ.

ಇಷ್ಟೇ ಅಲ್ಲ—

ಬಿರ್ಲಾಗಳು ಇಂಥ ಸಂತತಿಯವರನ್ನೇ ... ಕೊಳ್ಳುತಿದ್ದಾರೆ, ಅಥವಾ ಇವರನ್ನೇ.

ಶ್ರೀ ಸಿ. ಸಿ. ದೇಶಾಯಿ ಅವರು ಬಿರ್ಲಾರವರಲ್ಲಿ ಹಿಂದೆ ವಾಣಿಜ್ಯ ಕಾರ್ಯದರ್ಶಿಗಳಾಗಿದ್ದರು. ಈಗ ಒಂದು ತಿಂಗಳ ಬಳಿಕ ನಿವೃತ್ತರಾದ ಮೇಲೆ ಮತ್ತೆ ಬಿರ್ಲಾರವರು ಇವರನ್ನು ಪಡೆಯುತ್ತಾರೆ.

ಮುಂದ್ರಾ ಪ್ರಕರಣದ ಖ್ಯಾತಿಯ ಶ್ರೀ ಟಿ. ಟಿ. ಕೆ.ಯವರ ಪ್ರೀತಿ ಪಾತ್ರನಾಗಿದ್ದ ಯುವಕ ಎಲ್. ಕೆ. ಝಾ ಅವರಿಂದಾಗಿಯೇ ಔದ್ಯೋಗಿಕ ವಿಭಾಗದ ವಿಶೇಷ ಕಾರ್ಯದರ್ಶಿಯಾಗಿದ್ದ. ಈಗ ಈ ಝಾಗೆ ಬಿರ್ಲಾರವರಲ್ಲಿ ಒಂದು ಕೆಲಸ ದೊರೆಯಲಿದೆ.

ಇವರೇ ನೋಡಿ ನಮ್ಮ ಪ್ರಜಾಸತ್ತಾತ್ಮಕ ಸಮಾಜವಾದೀ ಸಮಾಜ ವ್ಯವಸ್ಥೆಯ ದೇಶವನ್ನು ಕಟ್ಟುತ್ತಿರುವ ಶಿಲ್ಪಿಗಳು. ಅಲ್ಲ—ಕಲ್ಲುಗುಟಿಕರು.

ಇನ್ನೊಂದು ಸಂಗತಿ

ಇದು ಕಾನಪುರದ ವಾಣಿಜ್ಯವರೇಣ್ಯರಿಗೆ ಸಂಬಂಧಿಸಿದ ಸಮಾಚಾರ. ಈ ಉದ್ಯಮಿಗಳು ಕಾಂಗ್ರೆಸ್ಸಿನವರಿಗೆ ಚುನಾವಣೆಯ ಕಾಲದಲ್ಲಿ ಸಹಾಯಮಾಡುವ "ದುಡ್ಡಿನ ಚೀಲ"ಗಳು. ಅಂತೆಯೇ ಇವರಿಂದ ಬರಬೇಕಾದ ಮಾರಾಟ ತೆರಿಗೆಯಾಗಲಿ, ಇನ್ನಾವುದೇ ಬಗೆಯ ಸುಂಕಗಳಾಗಲಿ, ಬಾಕಿಗಳಾಗಲಿ ಸರಕಾರದ ಬೊಕ್ಕಸಕ್ಕೆ ಸೇರುತ್ತಿಲ್ಲ. ಸಚಿವರುಗಳೂ, ಎಂ.ಎಲ್.ಎ.ಗಳೂ ಅವರವರೇ ಆದುದರಿಂದ ಸರಕಾರಯಂತ್ರ ಈ ಹಣವನ್ನು ವಸೂಲು ಮಾಡುವಲ್ಲಿ ಮುಂದೆ ಚಲಿಸುವುದೇ ಸಾಧ್ಯವಿಲ್ಲದಾಗಿದೆ. ಹೀಗೆ ಬರಬೇಕಾಗಿರುವ ಹಣ ಸುಮಾರು 10 ಕೋಟಿ ರೂಪಾಯಿಗಳು!

● ಕಾನ್‌ಪುರನಲ್ಲಿಯ ಗಿರಣಿಯ ಮಾಲೀಕರುಗಳು ವಿದ್ಯುಚ್ಛಕ್ತಿ ಬಳಕೆಗಾಗಿ 60 ಲಕ್ಷ ರೂಪಾಯಿಗಳ ಬಿಲ್ಲನ್ನು ಪಾವತಿ ಮಾಡಬೇಕಾಗಿದೆ. ಒಬ್ಬರೂ ಕೊಟ್ಟಿಲ್ಲ, ಕೊಡಬೇಕೆಂಬ 'ನೆನಪು'ಗಳಿಗೆ ಉತ್ತರವನ್ನು ಕೂಡ ಕೊಡುವದಿಲ್ಲ ! ಇವರು ಸರಕಾರದ ಒಡೆತನದಲ್ಲಿರುವ 'ಕೇಸಾ' ದಿಂದ ವಿದ್ಯುಚ್ಛಕ್ತಿಯನ್ನು ಪಡೆಯುತ್ತಾರೆ.

● ಕಾನ್‌ಪುರದ ಉದ್ಯಮಿಗಳು 5 ಕೋಟಿ ರೂಪಾಯಿಗಳನ್ನು ಉತ್ಪನ್ನ ತೆರಿಗೆಯನ್ನು ಪಾವತಿ ಮಾಡಬೇಕಾಗಿದೆ. ಅಲ್ಲದೆ 3 ಕೋಟಿ ರೂಪಾಯಿಗಳಷ್ಟನ್ನು ವ್ಯಾಪಾರೀ ಸುಂಕವನ್ನು ತೆತ್ತಿಲ್ಲ.

● ಕೆಲವು ವರುಷಗಳ ಹಿಂದೆ 3 ಕೋಟಿ ರೂಪಾಯಿಗಳನ್ನು ಕೆಲವು ಉದ್ಯಮಿಗಳಿಗೆ ರಾಜ್ಯದಲ್ಲಿ ಫ್ಯಾಕ್ಟರಿಗಳ ಸ್ಥಾಪನೆಗೆ ಕೊಡಲಾಯಿತು. ಈ ವರೆಗೂ ಒಂದು ಫ್ಯಾಕ್ಟರಿಯೂ ಮೇಲೇಳಲಿಲ್ಲ. ಅವರು ಆ ಹಣವನ್ನು ಬೇರೆ ಕಾಲಗಳಿಗೆ ಬಳಸಿಕೊಂಡರು.

ಹಂಗೇರಿ ಸರಕಾರದ ಪ್ರಕಟಣೆ

ಇಮ್ರೆ ನಾಜ್ ಮತ್ತವನ ಪಿತೂರಿ ಕೂಟ

ಎರಡು ವರ್ಷಗಳ ಹಿಂದೆ ಹಂಗೇರಿಯ ಜನತಾ ಪ್ರಜಾಪ್ರಭುತ್ವದ ವಿರುದ್ಧ ಒಳಸಂಚು ನಡೆಸಿ, ಸಶಸ್ತ್ರ ಬಂಡಾಯವೆದ್ದು, ಅಲ್ಲಿ ಬಂಡವಾಳಶಾಹೀ ಪ್ರಭುತ್ವವನ್ನು ತಿರುಗಿ ಸ್ಥಾಪಿಸಲು ಇಮ್ರೆ ನಾಜ್ ಮತ್ತವನ ಪಿತೂರಿ ಕೂಟ ಪ್ರಯತ್ನ ನಡೆಸಿತ್ತು. ಆ ಪ್ರಯತ್ನವನ್ನು ಅಣಗಿಸಿ ಹಂಗೇರಿಯ ಜನತಾ ಪ್ರಜಾಪ್ರಭುತ್ವವನ್ನು ಉಳಿಸಿದ್ದು, ಸಮಾಜವಾದೀ ಸಾಧನೆಗಳನ್ನು ರಕ್ಷಿಸಿದ್ದು, ವಿಶ್ವಶಾಂತಿಗೆ ಒದಗಿದ್ದ ಗಂಡಾಂತರವನ್ನು ಪಾರುಗೊಳಿಸಿದ್ದು ಹಂಗೇರಿಯ ಮಟ್ಟಿಗೆ ಮಾತ್ರವಲ್ಲ ಪ್ರಪಂಚದ ಮಟ್ಟಿಗೆನೇ ಬಹಳ ಮಹತ್ವವುಳ್ಳದ್ದಾಗಿದೆ. ತಮ್ಮ ಯತ್ನ ವಿಫಲವಾದುದರಿಂದ ಕುಪಿತಗೊಂಡ ಸಾಮ್ರಾಜ್ಯಶಾಹಿಗಳೂ ಅವರ ಕಿಂಕರರೂ ಕಳೆದ ಎರಡು ವರ್ಷಗಳಲ್ಲಿ ಹಂಗೇರಿಯ ಆಂತರಿಕ ವ್ಯವಹಾರಗಳಲ್ಲಿ ಕೈಹಾಕಲು ಶತಪ್ರಯತ್ನ ನಡೆಸಿದ್ದಾರೆ. ಹಂಗೇರಿಯ ಜನತಾ ಪ್ರಜಾಪ್ರಭುತ್ವ ಸರಕಾರದ ದೃಢ ನಿಲುವೆಯಿಂದಾಗಿ ಸಾಮ್ರಾಜ್ಯಶಾಹಿಗಳಿಗೆ ಒಳನುಸುಳಲು ಅವಕಾಶ ದೊರಕಲಿಲ್ಲ. ಜನತಾ ಪ್ರಜಾಪ್ರಭುತ್ವವನ್ನು ಉರುಳಿಸುವ ಪಿತೂರಿ—ಬಂಡಾಯಗಳನ್ನು ಸಂಘಟಿಸುವ ಪ್ರತಿರೋಧ ಶಕ್ತಿಗಳನ್ನು ಹಂಗೇರಿ ತೊಡೆದುಹಾಕುತ್ತಿದೆ. ಇಮ್ರೆ ನಾಜ್ ಮತ್ತವನ ಪಿತೂರಿ ಕೂಟದವರ ವಿಚಾರಣೆಯಾಗಿ ಅವರಿಗೆ ಮರಣದಂಡನೆ ವಿಧಿಸಲಾಗಿದೆ. ಅದನ್ನು ಘೋರತರವಾಗಿ ಚಿತ್ರಿಸಿ ಹಂಗೇರಿಯ ಜನತಾ ಪ್ರಜಾಪ್ರಭುತ್ವಕೆ ವಿರುದ್ಧ, ಸೋವಿಯತ್ ಯೂನಿಯನ್ ಮತ್ತು ಚೀನದ ವಿರುದ್ಧ, ಕಮ್ಯೂನಿಸ್ಟ್ ಚಳುವಳಿಯ ವಿರುದ್ಧ, ಶಾಂತಿ ಪರಿಶ್ರಮದ ವಿರುದ್ಧ ಅಪಪ್ರಚಾರದ ಬಿರುಗಾಳಿಯನ್ನು ಎಬ್ಬಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಹಂಗೇರಿ ಸರಕಾರದ ಪ್ರಕಟನೆಯು, ಇಮ್ರೆ ನಾಜ್ ಮತ್ತವನ ಪಿತೂರಿ ಕೂಟದ ವಿಚಾರಣೆಯಿಂದ ಸ್ಪಷ್ಟವಾಗಿರುವ ಸಂಗತಿಗಳನ್ನು ಜಾಹೀರುಗೊಳಿಸಿ ಅಪಪ್ರಚಾರಗಾರರಿಗೆ ಸರಿಯಾದ ಉತ್ತರ ಕೊಟ್ಟಿದೆ. ಆ ಪ್ರಕಟನೆಯ ಸಾರಾಂಶವನ್ನು ಕೆಳಗಡೆ ಕೊಡಲಾಗಿದೆ.

ದೇಶದ್ರೋಹದ ಅಪರಾಧ

ಹಂಗೇರಿಯ ಸುಪ್ರೀಂ ಕೋರ್ಟಿಗೆ ಒಳಪಟ್ಟ ಜನತಾ ನ್ಯಾಯಾಲಯವು, ಇಮ್ರೆನಾಜ್ ಮತ್ತವನ ಒಡನಾಡಿಗಳ ವಿಚಾರಣೆ ನಡೆಸಿ, ಅಪಾದಿತರ ಹೇಳಿಕೆಗಳ ಮತ್ತು 29ಸಾಕ್ಷಿಗಳು ಕೊಟ್ಟ ಪುರಾವೆಗಳ ಆಧಾರದಲ್ಲಿ, ತೀರ್ಮಾನ ಕೊಟ್ಟಿದೆ.

"ಇಮ್ರೆನಾಜ್ ಮತ್ತವನ ಒಡನಾಡಿಗಳಾದ ಗೆಜಾಲೊಸೊನ್ಸಿ, ಫೆರೆಂಕ್ ಡೊನೆತ್, ಮಿಕ್ಲೊಸ್ ಜಿಮ್ಸ್ ಹಾಗು ಜೋಸೆಫ್ ಸಿಲಾಜಿ 1955ರ ದಶಂಬರದಲ್ಲಿ ಬಲಾತ್ಕಾರದಿಂದ ಅಧಿಕಾರವನ್ನು ವಶಪಡಿಸುವ ಮತ್ತು ಹಂಗೇರಿಯ ಜನತಾ ಪ್ರಜಾಪ್ರಭುತ್ವವನ್ನು ಉರುಳಿಸುವ ಉದ್ದೇಶದಿಂದ ಸರಕಾರಕ್ಕೆ ವಿರೋಧವಾಗಿ ಒಂದು ಪಿತೂರಿಯನ್ನು ಸಂಘಟಿಸಿದರು. 1956 ಅಕ್ಟೋಬರದ ಪ್ರತಿಕ್ರಾಂತಿ ಬಂಡಾಯಕ್ಕೆ ತಯಾರು ಮಾಡುವುದರಲ್ಲೂ ಅದನ್ನು ಎಬ್ಬಿಸುವುದರಲ್ಲೂ ಇಮ್ರೆ ನಾಜ್ ಮತ್ತು ಒಡನಾಡಿಗಳು ಪ್ರಮುಖ ಪಾತ್ರ ವಹಿಸಿದ್ದಾರೆಂದು ವಿಚಾರಣೆಯಿಂದ ಕಂಡುಬಂದಿದೆ.

"1956 ಅಕ್ಟೋಬರದಲ್ಲಿ ಇಮ್ರೆ ನಾಜ್ ಮತ್ತವನ ಒಡನಾಡಿಗಳ ಪ್ರತಿರೋಧ ಉದ್ದೇಶಗಳನ್ನು ತಿಳಿದ ಜೊಲ್ಟನ್ ಟಿಲ್ಡಿ ಮತ್ತು ಪಾಲ್ ಮೆಲೆಟರ್, ಅವರ ಅಭಿಪ್ರಾಯಗಳನ್ನು ಒಪ್ಪುವುದಾಗಿ ತಿಳಿಸಿದಲ್ಲದೆ ಪ್ರತಿಕ್ರಾಂತಿ ಬಂಡಾಯದ ಚಟುವಟಿಕೆಗಳಲ್ಲಿ ಅವರೊಂದಿಗೆ ಸೇರಿಕೊಂಡರು.

ಇಮ್ರೆನಾಜ್ ಆಳ್ವಿಕೆಯಲ್ಲಿ -

★ 234 ಜನ ನಿರಪರಾಧಿಗಳ ಮೃಗೀಯ ಕೊಲೆ ನಡೆಯಿತು.

★ 3,000 ನಾಗರಿಕರನ್ನು ಕಾರಾಗಾರಕ್ಕೆ ಅಟ್ಟಲಾಗಿತ್ತು.

★ 10,000 ಜನರ ನಿರ್ಮೂಲನದ ಯೋಜನೆ ಕೂಡ ಇತ್ತು.

ಈ ಬಂಡಾಯಗಾರರ ಗುಂಪಿನವರು ಆಂತರಿಕ ಪ್ರತಿಗಾಮಿ ಶಕ್ತಿಗಳ ನಾಯಕತ್ವ ವಹಿಸಿದ್ದಲ್ಲದೆ, ವಿದೇಶೀ ಸಾಮ್ರಾಜ್ಯವಾದಿಗಳ ಸಹವರ್ತನೆಯೊಂದಿಗೆ ಹಂಗೇರಿಯ ಜನತಾ-ಪ್ರಜಾಪ್ರಭುತ್ವವನ್ನು ಉರುಳಿಸುವ ದಂಗೆಗೆ ಪ್ರಯತ್ನಿಸಿದರು."

ವಿರೋಧ ಚಟುವಟಿಕೆಗಳು

ಇಮ್ರೆ ನಾಜ್ 1955ರ ಕೊನೆಯಲ್ಲೇ ಒಂದು ಚಿಕ್ಕ ಗುಪ್ತ ಗುಂಪನ್ನು ಕಟ್ಟಿದ್ದ. ಆ ಗುಂಪು ಕಾನೂನು ಬದ್ಧ ಹಾಗೂ ಕಾನೂನು ಬಾಹಿರ ಕ್ರಮಗಳಿಂದ ಸರಕಾರಕ್ಕೆ ವಿರೋಧವಾದ ಚಟುವಟಿಕೆಗಳನ್ನು ನಡೆಸುತ್ತಿದ್ದಿತು. ಬಲಾತ್ಕಾರದಿಂದ ಅಧಿಕಾರವನ್ನು ಕಸಿದುಕೊಳ್ಳುವುದು ಈ ಗುಂಪಿನ ಉದ್ದೇಶವಾಗಿದ್ದಿತು. ಅದು ಜನತಾ ಪ್ರಜಾಪ್ರಭುತ್ವ ಪದ್ಧತಿಯ ಎಲ್ಲ ಅಂಗಗಳಲ್ಲೂ ಸಂಪರ್ಕಗಳನ್ನು ಏರ್ಪಡಿಸಿಕೊಂಡಿತ್ತು. ಅದೇ ಸಮಯದಲ್ಲಿ ಅದು ಸಮಾಜವಾದೀ ಘೋಷಣೆಗಳ ಮೂಲಕ ಜನರನ್ನು ಮೋಸಗೊಳಿಸಲು ಯತ್ನಿಸುತ್ತಿದ್ದಿತು.

ಇಮ್ರೆನಾಜ್ ಮತ್ತವನ ಸಂಗಡಿಗರು ಜನತಾ ಪ್ರಜಾಪ್ರಭುತ್ವವನ್ನು ನಾಶಮಾಡುವುದಕ್ಕೆ ಒಂದು ಕಾರ್ಯಕ್ರಮವನ್ನೆ ತಯಾರಿಸಿಕೊಂಡಿದ್ದರು. ಅವರ ವಿಚಾರಣೆಯ ಕಾಲದಲ್ಲಿ ನ್ಯಾಯಾಲಯದ ಮುಂದೆ ಸಾದರ ಪಡಿಸಲಾಗಿರುವ ಅವರ ಗುಪ್ತ ದಸ್ತಾವೇಜುಗಳೇ ಅದನ್ನು ವ್ಯಕ್ತಪಡಿಸುತ್ತವೆ.

ಅವರ ಪಿತೂರಿ

ಇಮ್ರೆನಾಜ್ ಮತ್ತವನ ಒಡನಾಡಿಗಳ ಭೂಗತ ಗುಂಪು ಕಾರ್ಮಿಕರ ಮತ್ತು ರೈತ ಶಕ್ತಿಯನ್ನು ಬಲಗುಂದಿಸಲು, ಮತ್ತು ಜನತಾ ಪ್ರಜಾಪ್ರಭುತ್ವ ಪದ್ಧತಿಯ ಸಂಘಟನೆಯನ್ನು ಮುರಿಯಲು ಪ್ರಯತ್ನ ನಡೆಸಿದೆ.

ಈ ವಿರೋಧ ಚಟುವಟಿಕೆಗಳಲ್ಲಿ ಅವರು, ಮತ್ತೆ ಪಶ್ಚಿಮಕ್ಕೆ ಪರಾರಿಯಾದ ಗಾಬೊರ್ ಟಂಕೊಸ್ ಮತ್ತು ಬಲಾಸ್ ನಾಜ್ ಮುಂತಾದವರಿಂದ ಬೆಂಬಲ ಪಡೆದರು. ಕೆಲವು ಸಂಸ್ಥೆಗಳನ್ನು ಪಾರ್ಟಿಗೂ ಪ್ರಭುತ್ವಕ್ಕೂ ವಿರೋಧವಾಗಿ ಉಪಯೋಗಿಸಿದ್ದಾರೆ.

ಬಲಾತ್ಕಾರ ಪ್ರಯೋಗಿಸುವ ಯೋಜನೆ

ಪಿತೂರಿಗಾರರ ಈ ಗುಂಪು ಪತ್ರಿಕೆಗಳಲ್ಲಿ ಉದ್ರೇಕಕಾರಿ ಲೇಖನಗಳನ್ನು ಪ್ರಕಟಿಸಿದ್ದು ಸಮಾಜವಾದೀ ನಿರ್ಮಾಣದಲ್ಲಿ ಆಗಿರುವ ಕೆಲವು ತಪ್ಪುಗಳನ್ನು ಅತಿಯಾಗಿ ಉತ್ಪ್ರೇಕ್ಷೆಮಾಡಿ ಜನತಾ ಪ್ರಜಾಪ್ರಭುತ್ವ ಪದ್ಧತಿಯ ವಿರುದ್ಧ ಅವಹೇಳನ ನಡೆಸಿತು. ಇದೆಲ್ಲವರ ಗುರಿ, ಬಲಾತ್ಕಾರದಿಂದ ಅಧಿಕಾರ ವಶಪಡಿಸಿಕೊಂಡು ಜನತಾ ಪ್ರಜಾಪ್ರಭುತ್ವವನ್ನು ಮುರಿಯುವುದೇ ಆಗಿತ್ತು. ಅವಶ್ಯಬಿದ್ದರೆ ಬಲತ್ಕಾರವನ್ನೂ ಪ್ರಯೋಗಿಸುವುದಾಗಿ ಈ ಗುಂಪಿನ ಕೆಲವರು ಬಹಿರಂಗವಾಗಿ ಹೇಳಿದ್ದಾರೆ, ಅಲ್ಲದೆ "ಇಮ್ರೆನಾಜ್ ಮತ್ತವನ ಒಡನಾಡಿಗಳು ಅಧಿಕಾರವನ್ನು ವಶಪಡಿಸಲು ಸಿದ್ಧರಾಗಿದ್ದಾರೆ" ಎಂದು ಗುಪ್ತ ಸಭೆಗಳಲ್ಲಿ ಘೋಷಿಸಿದ್ದಾರೆ.

1956 ಅಕ್ಟೋಬರ್ 23ರ ಬಂಡಾಯವು ಇಮ್ರೆನಾಜ್ ಮತ್ತವನ ಗುಂಪಿನ ಪ್ರೇರಣೆಯಿಂದ ಆರಂಭವಾಯಿತು. ಬಂಡಾಯದ ಸಂದರ್ಭದಲ್ಲಿ ಈ ಗುಂಪಿನವರು ಆಗಾಗ ಗುಪ್ತವಾಗಿ ಸಭೆ ಸೇರಿ ಕಾರ್ಯಕ್ರಮ ನಿರ್ಣಯಿಸುತ್ತಿದ್ದರು. ಬಂಡಾಯ ಯಶಸ್ವಿಯಾದಾಗ ಅವರು ರಚಿಸುವ ಸರಕಾರದ ಕಾರ್ಯಕ್ರಮಗಳನ್ನೆಲ್ಲ ಅವರು ಮೊದಲೇ ತಯಾರಿಸಿದ್ದರು.

1956 ಅಕ್ಟೋಬರ್ 23ರಂದು ಗೆಜಾಲೊಸೊನ್ಸಿಯ ಮನೆಯಲ್ಲಿ ಒಂದು ಗೂಢಾಲೋಚನೆಯ ಸಭೆ ನಡೆಯಿತು. ಅದರಲ್ಲಿ ಇಮ್ರೆನಾಜ್ ಮತ್ತವನ ಈ ಸಂಗಡಿಗರು ಭಾಗವಹಿಸಿದ್ದರು. ಆ ಸಭೆಯಲ್ಲಿ ಬಂಡಾಯಗಾರರ ಸರಕಾರದ ಪಟ್ಟಿ ತಯಾರಿಸಲ್ಪಟ್ಟಿತು. ಅದರಲ್ಲಿ ಇಮ್ರೆನಾಜ್ ಮುಖ್ಯ ಮಂತ್ರಿಯಾಗಬೇಕೆಂದು ನಿರ್ಣಯವಾಯಿತು. ಬಂಡಾಯಗಾರರೊಳಗೆ ಮಂತ್ರಿ ಪದವಿಗಳು ಹಂಚಲ್ಪಟ್ಟವು.

23ರ ಮತ ಪ್ರದರ್ಶನದ ಜೊತೆಯಲ್ಲೆ ಸಶಸ್ತ್ರ ಬಂಡಾಯವೂ ಆರಂಭವಾಯಿತು. ಬಂಡಾಯಗಾರರು ಅನೇಕ ಭೂಗತ ಕೇಂದ್ರಗಳನ್ನು ರಚಿಸಿಕೊಂಡರು. ಅಂಥ ಒಂದು ಕೇಂದ್ರವು ಬುಡಾಪೆಸ್ಟ್ ಪೋಲೀಸ್ ಖಾತೆಯೊಳಗೂ ಸ್ಥಾಪಿಸಲ್ಪಟ್ಟಿತು.

ಬುಡಾಪೆಸ್ಟ್ ಪೋಲೀಸ್ ಅಧಿಕಾರಿ ಸಂಡೋರ್ ಕೊಪಸ್ಸಿ, ತನ್ನ ಪ್ರಮಾಣ ವಚನವನ್ನು ಮುರಿದು, ಬಂಡುಗಾರರ ಜೊತೆಗೆ ಸೇರಿದನಲ್ಲದೆ ತನ್ನ ಕೈಕೆಳಗಿನವರಿಗೆ ತಪ್ಪು ತಿಳುವಳಿಕೆ ಕೊಟ್ಟು ಭೂಗತ ಬಂಡಾಯ ಕೇಂದ್ರದ ಯೋಜನೆಗಳನ್ನು ಜಾರಿಗೊಳಿಸಿದ, ಸಮಾಜವಾದದ ಶತ್ರುಗಳಿಗೆ ಆಯುಧ ಒದಗಿಸುವ ಮತ್ತು ಸಮಾಜವಾದದ ರಕ್ಷಕರನ್ನು ನಿರಾಯುಧರನ್ನಾಗಿ ಮಾಡುವ ಉದ್ದೇಶದಿಂದ ಅವನು ಬಂಡಾಯಗಾರರನ್ನು ಪ್ರತಿಭಟಿಸಬಾರದೆಂದೂ ಆಯುಧಗಳನ್ನೆಲ್ಲ ಅವರ ವಶಪಡಿಸಬೇಕೆಂದೂ ಪೋಲೀಸು ದಳಗಳಿಗೆ ಆಜ್ಞೆಯಿತ್ತ. ಅವನು ಈ ರೀತಿಯಲ್ಲಿ 20,000 ಬಂದೂಕುಗಳನ್ನು ಬಂಡಾಯಗಾರರಿಗೆ ಒದಗಿಸಿದ.

ಇಂಥ ಇನ್ನೊಂದು ಕೇಂದ್ರವು ಸೈನ್ಯದೊಳಗೆ ರಚಿಸಲ್ಪಟ್ಟಿತ್ತು. ಅದು ಸೈನಿಕರನ್ನು ಪ್ರಭುತ್ವಕ್ಕೆ ಇದಿರಾಗಿ ದಂಗೆಯೇಳಲು ಪ್ರಚೋದಿಸಿತು. ಜನತಾ ಪ್ರಜಾಪ್ರಭುತ್ವವನ್ನು ರಕ್ಷಿಸುವ ಸೈನ್ಯಗಳ ಯೋಜನೆಗಳನ್ನೆಲ್ಲ ಆ ಕೇಂದ್ರವು ಬಂಡಾಯಗಾರರಿಗೆ ತಲುಪಿಸಿತು.

ಪ್ರತಿಗಾಮಿಗಳೊಡನೆ ಸಂಪರ್ಕ

ಬಂಡಾಯಕ್ಕಿಂತ ಎಷ್ಟೋ ಮೊದಲೇ ಇಮ್ರೆನಾಜ್ ಬಂಡವಾಳಶಾಹಿ ಪ್ರತಿರೋಧ ಶಕ್ತಿಗಳೊಂದಿಗೆ ಸಂಪರ್ಕ ಏರ್ಪಡಿಸಿಕೊಂಡಿದ್ದ. ಘಟನೆಗೆ ವಿರೋಧವಾಗಿ 70 ವಿವಿಧ ರಾಜಕೀಯ ಪಕ್ಷಗಳನ್ನು ಸಂಘಟನೆಗೊಳಿಸಲು ನಾಜ್ ಸಹಾಯಕನಾದ. ಅವುಗಳ ಪೈಕಿ ಬಂಡವಾಳಶಾಹಿ, ಫ್ಯಾಸಿಸ್ಟ್ ಪಕ್ಷಗಳೂ ಇದ್ದುವು. ಇಂಥ ಪಕ್ಷಗಳ "ಒಕ್ಕೂಟ" ಏರ್ಪಡಿಸಿ, ಅದರ ಆಧಾರದಲ್ಲಿ ಸರಕಾರ ರಚಿಸುವುದು ನಾಜ್‌ನ ಯೋಜನೆಯಾಗಿತ್ತು. ಹಿಂದೆ ಕಾನೂನು ಪ್ರಕಾರ ಶಿಕ್ಷೆಗೆ ಗುರಿಯಾಗಿದ್ದ ಕಾರ್ಡಿನಲ್ ಮಿಂಡ್ಸೆಂಟಿಯನ್ನು ಬಿಡುಗಡೆಮಾಡಿ ಸರಕಾರದ ವಿರುದ್ಧ ವರ್ತಿಸಲು ಅವನಿಗೆ ನಾಜ್ ಅವಕಾಶ ಮಾಡಿಕೊಟ್ಟ.

ದೇಶದ ಹೊರಗಿರುವ ಪ್ರತಿಗಾಮಿಗಳ ಜೊತೆಯಲ್ಲೂ ನಾಜ್ ಸಂಪರ್ಕ ಬೆಳೆಸಿಕೊಂಡು, ತನ್ನ ಬಂಡಾಯಕ್ಕೂ ಬಂಡುಗಾರರ ಸರಕಾರಕ್ಕೂ ಅವರ ಬೆಂಬಲವನ್ನು ಪಡೆದ.

ಮುಖ್ಯ ಮಂತ್ರಿಯಾದ ಇಮ್ರೆನಾಜ್ ಘಟನಾತ್ಮಕ ಸರಕಾರವನ್ನು ರದ್ದುಗೊಳಿಸಿದ; ರಾಷ್ಟ್ರೀಯ ಎಸೆಂಬ್ಲಿಯನ್ನೂ ಜನತಾ ಪ್ರಜಾಪ್ರಭುತ್ವದ ಅಧ್ಯಕ್ಷ ಮಂಡಲಿಯನ್ನೂ ಕಿತ್ತುಹಾಕಿದ. ಅನಂತರ ಕಾನೂನು ಬಾಹಿರವಾಗಿ ತನ್ನದೊಂದು ಮಂತ್ರಿ ಮಂಡಲವನ್ನು ರಚಿಸಿಕೊಂಡ.

ಪ್ರತಿಗಾಮಿ ಮಂತ್ರಿಮಂಡಲ

ಇಮ್ರೆನಾಜ್ ತನ್ನ ಮಂತ್ರಿಮಂಡಲದಲ್ಲಿ ಪ್ರತಿಗಾಮಿಗಳನ್ನೆಲ್ಲಾ ಸೇರಿಸಿಕೊಂಡ. ಅದರ ಜೊತೆಯಲ್ಲೆ ಜನರನ್ನು ಮೋಸಗೊಳಿಸಲು ಸಮಾಜವಾದದಲ್ಲಿ ನಿಷ್ಠೆಯುಳ್ಳ ಕೆಲವರನ್ನು ಸೇರಿಸಿಕೊಂಡ. ನವೆಂಬರ 2ರಂದು ಈ ಮಂತ್ರಿಮಂಡಲದಲ್ಲಿ ಇನ್ನೂ

(ಕೊನೇ ಪುಟ ನೋಡಿ)

ಬಿಜಾಪುರ ಕಾಂಗ್ರೆಸ್ಸಿನಲ್ಲಿ ಇಬ್ಭಾಗ

ಒಬ್ಬ ಕಾಂಗ್ರೆಸ್ಸಿಗರಿಂದ ಇನ್ನೊಬ್ಬ ಕಾಂಗ್ರೆಸ್ಸಿಗರಿಗೆ ಬಹಿಷ್ಕಾರದ ತಮಾಷೆ !

[ಸ್ವಂತ ಸುದ್ದಿಗಾರರಿಂದ]

ಬಿಜಾಪುರ ಕಾಂಗ್ರೆಸ್ಸಿನಲ್ಲಿ ವಿಚಿತ್ರ ಘಟನೆಗಳು ಘಟಿಸುತ್ತಿವೆ. ಇಲ್ಲಿಯ ಕಾಂಗ್ರೆಸ್ಸಿನಲ್ಲಿ ಅಂಬ್ಲಿ ಗುಂಪು ಮತ್ತು ದುಬೆ ಗುಂಪು ಎಂಬ ಎರಡು ಘಟಕಗಳಿದ್ದು, ಕೆಲವು ತಿಂಗಳ ಹಿಂದೆ ಜಿಲ್ಲಾ ಕಾಂಗ್ರೆಸ್ ಸಮಿತಿ ಚುನಾವಣೆಯಾದ ನಂತರ ಈ ಗುಂಪುಗಳೊಳಗಿನ ಜಗಳ ಪ್ರಕೋಪಕ್ಕೆ ಹೋಗಹತ್ತಿದೆ. ಅಂಬ್ಲಿ ಗುಂಪಿನವರು ಸಾವುಕಾರ ಚೆನ್ನಯ್ಯನವರಿಗೂ ದುಬೆ ಗುಂಪಿನವರು ನಿಜಲಿಂಗಪ್ಪನವರಿಗೂ ಬೆಂಬಲ ಕೊಡುತ್ತಿರುವರು. ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರ ಚುನಾವಣೆಯ ದಿವಸ ಅಂಬ್ಲಿ ಗುಂಪಿನವರು ಸಭಾತ್ಯಾಗ ಮಾಡಿದ್ದರು. ಅನಂತರ ಇಂಡಿಯಲ್ಲಿ ಪ್ರತ್ಯೇಕವಾಗಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಚೇರಿ ತೆಗೆಯಬೇಕೆಂಬ ಪ್ರಯತ್ನವೂ ನಡೆದು ವಿಫಲವಾಯಿತು. ಸದ್ಯದ ಅಧಿಕಾರಿಗಳ ವಿರುದ್ಧ ಬೆಂಗಳೂರು, ದಿಲ್ಲಿ ತನಕವೂ ತಕ್ರಾರು.ಅರ್ಜಿಗಳು ಹೋಗಿದ್ದವು. ಸದ್ಯ ಅಂಬ್ಲಿ ಗುಂಪಿನವರು ಕಾಂಗ್ರೆಸ್ ಭವನಕ್ಕೆ ಹೋಗುವುದಿಲ್ಲ. ಕಾಂಗ್ರೆಸ್ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿಲ್ಲ. 19—6—58ನೇ ದಿವಸ ಮೈಸೂರು ರಾಜ್ಯದ ಲವಾಣಿ ಜನರ ಮೊದಲನೇ ಪರಿಷತ್ತು ಸೇರಿದಾಗ (ಕಂಠಿಯವರು ಅಧ್ಯಕ್ಷರು, ನಿಜಲಿಂಗಪ್ಪನವರು ಉದ್ಘಾಟಕರು) ಮತ್ತು 18—6—58ರಂದು ಬಾಗಲಕೋಟೆಯಲ್ಲಿ ಹರಿಣ ಶಿಕಾರಿ ಜನರ ಸಮ್ಮೇಳನ ಸೇರಿದಾಗ, ಅಂಬ್ಲಿ ಗುಂಪಿನವರು ಭಾಗವಹಿಸದೆ ಸಂಪೂರ್ಣ ಬಹಿಷ್ಕಾರ ಹಾಕಿದ್ದರು. ಇದೇ ರೀತಿ ಸಾರ್ವಜನಿಕ ಸಭೆ ಮತ್ತು ಕಾರ್ಯಕರ್ತರ ಸಭೆ ಕೂಡಿದಾಗಲೂ ಅಂಬ್ಲಿ ಗುಂಪಿನವರಾರೂ ಕಾಣಿಸಲಿಲ್ಲ. ಪರಿಸ್ಥಿತಿ ಹೀಗಿದ್ದರೂ ಕೂಡ, ನಿಜಲಿಂಗಪ್ಪನವರು ಬಿಜಾಪುರದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ "ಎಲ್ಲೆಡೆಗೂ ಕಾಂಗ್ರೆಸ್ಸಿನ ಧ್ವಜವೇ ಹಾರಾಡುತ್ತಿದೆ. ಕಾಂಗ್ರೆಸ್ಸನ್ನು ಬಿಟ್ಟರೆ ಬೇರಾವುದೇ ಪಾರ್ಟಿಗೆ ರಾಜ್ಯವಾಳಲು ಸಾಧ್ಯವಿಲ್ಲ" ಎಂದು ಹೇಳಿದರು.

ಹೀಗೆ ಬಿಜಾಪುರ ಕಾಂಗ್ರೆಸ್ ಎರಡು ಹೋಳುಗಳಾಗಿ ನಶಿಸುತ್ತಿರುವ ಸ್ಪಷ್ಟ ಲಕ್ಷಣಗಳೂ ಜನರು ಎಡಪಕ್ಷಗಳ ಕಡೆಗೆ ಗಮನ ಕೊಡುತ್ತಿರುವುದೂ ಕಂಡು ಬರುತ್ತಿದೆ.

ಎಚ್.ಎಂ.ಟಿ. ಮ್ಯಾನೇಜ್‌ಮೆಂಟ್:

ಕಾರ್ಮಿಕರಿಗೂ ಇದರಲ್ಲಿ ಸಮಪ್ರಾತಿನಿಧ್ಯ

(೫ನೇ ಪುಟದಿಂದ)

ಎಸ್. ಕೃಷ್ಣನ್ (ಅಧ್ಯಕ್ಷ), ಜಾರ್ಜ್ ಜೇಕಬ್ (ಉಪಾಧ್ಯಕ್ಷ), ಎ. ಬಿ. ಭಟ್ಟಾಚಾರ್ಜಿ (ಕಾರ್ಯದರ್ಶಿ); ಕೆ ಎಂ. ಮುನಿಯಪ್ಪ (ಉಪಕಾರ್ಯದರ್ಶಿ) ಮತ್ತು ಎಸ್. ಕೆ. ಬ್ಯಾನರ್ಜಿ (ಖಜಾಂಚಿ)ಯವರು ಆಡಳಿತ ಮಂಡಲಿಯಲ್ಲಿರುತ್ತಾರೆ.

ಕಾರ್ಮಿಕರು ಮ್ಯಾನೇಜ್‌ಮೆಂಟಿನಲ್ಲಿ ಭಾಗವಹಿಸಿರುವುದನ್ನು ಈಗಾಗಲೇ ಕೇರಳದ ಕಮ್ಯೂನಿಸ್ಟ ಸರಕಾರವು ತನ್ನ ಕೈಗಾರಿಕೆಗಳಲ್ಲಿ ಜಾರಿಗೆ ತಂದಿದೆ. ಮದ್ರಾಸಿನ ಸಿಂಪ್ಸನ್ ಗ್ರೂಪ್ ಕಂಪೆನಿಯಲ್ಲಿ ಈ ಯೋಜನೆ ಪ್ರಾರಂಭವಾಗಿದೆ, ಇದೀಗ ಭಾರತ ಸರಕಾರ ನಡೆಸುತ್ತಿರುವ ಮುಖ್ಯ ಕೈಗಾರಿಕೆಯೊಂದರಲ್ಲಿ ಪ್ರಾರಂಭವಾಗುತ್ತಿದೆ. ಈ ಪ್ರಯೋಗ ಯಶಸ್ವಿಯಾದಲ್ಲಿ, ಕೈಗಾರಿಕೆ ಅಭಿವೃದ್ಧಿಗೊಳ್ಳುವುದು ಮಾತ್ರವಲ್ಲ, ಕಾರ್ಮಿಕರ ಜೀವನ ಮಟ್ಟವೂ, ಪರಿಸ್ಥಿತಿಯೂ ಉತ್ತಮಗೊಳ್ಳುವುದರಲ್ಲಿ ಸಂದೇಹವಿಲ್ಲ.

—

ಬಿಜಾಪುರ—

ಅಲ್ಜೀರಿಯಾ ಜನತೆಗೆ ಬೆಂಬಲ

"ಮುಂಬಯಿ, ಕಲ್ಕತ್ತಾ, ಮದ್ರಾಸ್ ಮೊದಲಾದ ಬಂದರಗಳಲ್ಲಿ ಕೆಲಸಮಾಡುತ್ತಿರುವ, ಬಂದರ ಮತ್ತು ಧಕ್ಕೆ ಕೆಲಸಗಾರರ ನ್ಯಾಯವಾದ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡುತ್ತದೆ. ಮದ್ರಾಸಿನ ಬಂದರ ಕೆಲಸಗಾರರ ಮೇಲಾದ ಪೋಲೀಸರ ಗೋಳಿಬಾರನ್ನು ಖಂಡಿಸಿ, ಇದರ ಕುರಿತು ಬಹಿರಂಗ ವಿಚಾರಣೆಯಾಗಬೇಕೆಂದು ಕೇಳಿಕೊಳ್ಳುತ್ತದೆ" ಎಂಬ ಠರಾವು ತಾ. 21—6—58ಕ್ಕೆ ಕಮ್ಯೂನಿಸ್ಟ ಪಾರ್ಟಿಯ ಪರವಾಗಿ ಸೇರಿದ್ದ ಸಾರ್ವಜನಿಕ ಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು. ಇದೇ ರೀತಿ ಅಲ್ಜೀರಿಯದ ಜನತೆಯ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲ ಕೊಡಬೇಕೆಂದೂ, ಜನತೆಯನ್ನು ಗುಲಾಮಗಿರಿಯಲ್ಲೇ ಇಡಬೇಕೆಂಬ ಫ್ರೆಂಚ್ ಸಾಮ್ರಾಜ್ಯಶಾಹಿಗಳ ಕುಟಿಲ ನೀತಿಯನ್ನು ವಿರೋಧಿಸಬೇಕೆಂದೂ ಮತ್ತೊಂದು ಠರಾವಿನಲ್ಲಿ ಜನತೆಗೆ ಕರೆಕೊಡಲಾಯಿತು. ಇದರಂತೆಯೇ ಬಾಗಲಕೋಟೆ ಸಿಮೆಂಟ ಕಾರ್ಖಾನೆಯಲ್ಲಾಗುತ್ತಿರುವ ದಬ್ಬಾಳಿಕೆಯನ್ನು ಖಂಡಿಸಿ, ಮಹಮ್ಮದ್ ಗೌಸ್ ಎಂಬ ಕೆಲಸಗಾರನು ತನ್ನ ಮೇಲಾದ ಅನ್ಯಾಯದ ವಿರುದ್ಧ 30—6—58ರಿಂದ ಕೈಗೊಳ್ಳಲಿರುವ ಅನ್ನ ಸತ್ಯಾಗ್ರಹಕ್ಕೆ ಸಂಪೂರ್ಣ ಬೆಂಬಲ ನೀಡುವ ಠರಾವು ಪಾಸಾಯಿತು.

ಸಭೆಯ ಪ್ರಾರಂಭದಲ್ಲಿ ಎಸ್. ಕೆ. ಉಪಾಧ್ಯಾಯರು, ಮೈಸೂರು ಮಂತ್ರಿ ಮಂಡಲದಲ್ಲಾದ ಬದಲಾವಣೆಯ ಕುರಿತು ಮಾತಾಡುತ್ತ, ಕಾಂಗ್ರೆಸ್ ಮಂತ್ರಿ ಮಂಡಲ ಅದರ ಸದಸ್ಯರಿಂದಲೇ ಕೆಡನಲ್ಪಡುವುದು, ಕಾಂಗ್ರೆಸ್ ಸಂಸ್ಥೆಯ ಆಂತರಿಕ ಜಗಳ ಮತ್ತು ಅದರ ನಿಷ್ಕ್ರಿಯತೆಯನ್ನು ತೋರಿಸಿಕೊಡುತ್ತದೆಂದೂ, ಅಸ್ಥಿರ ಸರಕಾರದಿಂದ ಪ್ರಾಂತ ಬೆಳವಣಿಗೆಗೆ, ಆಡಳಿತೆಯ ಸುಧಾರಣೆಗೆ ಅಡ್ಡಿಯಾಗುತ್ತದೆಂದೂ, ಜನರು ಕಾಂಗ್ರೆಸ್ಸಿನೊಳಗಿನ ಜಗಳವನ್ನರಿತುಕೊಂಡು, ನವರಾಜ್ಯದ ಅಭಿವೃದ್ಧಿಯ ಸಲುವಾಗಿ ಎಡಪಕ್ಷವನ್ನು ಬೆಳೆಸಲು ಸಹಾಯಮಾಡಬೇಕೆಂದೂ ಕೇಳಿಕೊಂಡರು. ಅನಂತರ, ಠಾಣದಿಂದ ಲೋಕಸಭೆಗೆ ಆರಿಸಿ ಬಂದಿರುವ ಎಸ್. ವಿ. ಪರುಳೇಕರವರು "ಒಂದು ವರ್ಷ ಲೋಕ ಸಭೆಯಲ್ಲಿ ನಡೆದದ್ದೇನು" ಎಂಬುದನ್ನೂ, ಸರಕಾರದ ಕರ ಹೇರುವ ನೀತಿಯನ್ನೂ ಕುರಿತು ಮಾತನಾಡಿದರು. ಕೊನೆಗೆ ಬಾಲಸಿಂಗ್ ಮಾಸ್ತರರು ಕಾಂಗ್ರೆಸ್ ಸರಕಾರದಿಂದ ಜನಹಿತವಾಗಲು ಸಾಧ್ಯವಿಲ್ಲ ಎಂದೂ, ಜನರು ಸಂಘಟಿತರಾಗಿ ಸರಕಾರದ ಜನವಿರೋಧಿ ನೀತಿಯನ್ನು ವಿರೋಧಿಸಬೇಕೆಂದೂ ಹೇಳಿದ ನಂತರ ಸಭಾಂತ್ಯವಾಯಿತು.

ದೊಡ್ಡಬಳ್ಳಾಪುರ ಟೌನ್ ಮುನ್ಸಿಪಲ್ ವೈಸ್‌ಪ್ರೆಸಿಡೆಂಟರ ಚುನಾವಣೆ

ತಾ. 21—6—58ನೇ ಶನಿವಾರ ಮುನಿಸಿಪಲ್ ಉಪಾಧ್ಯಕ್ಷರ ಸ್ಥಳಕ್ಕೆ ಕಾರ್ಮಿಕರ ಹಿತೈಷಿ ಶ್ರೀ.ಕೆ. ವೇದಮೂರ್ತಿಯವರೂ, ಮತ್ತು ಅವರ ಪ್ರತಿಸ್ಪರ್ಧಿಯಾಗಿ ಜನಸಂಘದ ಪರ ಶ್ರೀ ವಿಶ್ವನಾಥ

(೮ನೇ ಪುಟ ನೋಡಿ)

ಸ್ಟಾಕ್‌ಹೋಮ್ ಅಧಿವೇಶನಕ್ಕೆ ಕೇರಳದ ಸಚಿವರು-ಲೇಖಕರು

ಈ ತಿಂಗಳು ಸ್ಟಾಕ್‌ಹೋಮ್‌ನಲ್ಲಿ ಸೇರುವ ನಿರಾಯುಧೀಕರಣ ಮತ್ತು ಅಂತರರಾಷ್ಟ್ರೀಯ ಸಹಕಾರ ಕಾಂಗ್ರೆಸ್ ಅಧಿವೇಶನಕ್ಕೆ ಭಾರತೀಯ ಪ್ರತಿನಿಧಿಯ ಮಂಡಳಿಯಲ್ಲೊಬ್ಬರಾಗಿ ಕೇರಳದ ಕಾನೂನು ಸಚಿವ ಶ್ರೀ ವಿ ಆರ್. ಕೃಷ್ಣ ಅಯ್ಯರ್ ಅವರು ತೆರಳುತ್ತಾರೆ.

ಈ ವರುಷದ ಮಲೆಯಾಳೀ ಶ್ರೇಷ್ಠ ಕಾದಂಬರಿಯ ಬಗ್ಗೆ ರಾಷ್ಟ್ರಾಧ್ಯಕ್ಷರ ಚಿನ್ನದ ಪದಕವನ್ನು ಪಡೆದ ಹೆಸರಾಂತ ಕಾದಂಬರಿಕಾರ ಶ್ರೀ ಟಿ. ಶಿವಶಂಕರ ಪಿಳ್ಳೆ ಅವರು ಕೂಡಾ ಸ್ಟಾಕ್‌ಹೋಂ ಅಧಿವೇಶನಕ್ಕೆ ಹೋಗಬಹುದೆಂದು ನಿರೀಕ್ಷಿಸಲಾಗಿದೆ.

ಶ್ರೀ ಕೃಷ್ಣ ಐಯ್ಯರ್‌ರವರು ಅಧಿವೇಶನ ಮುಗಿದ ಬಳಿಕ ಪೂರ್ವ ಯೂರೋಪಿನ ದೇಶಗಳಿಗೂ ಸೋವಿಯತ್ ದೇಶಕ್ಕೂ ಭೇಟಿಯೀಯಬಹುದೆಂದು ನಿರೀಕ್ಷಿಸಲಾಗಿದೆ.

ದೊಡ್ಡಬಳ್ಳಾಪುರದ—

ಸಾಹುಕಾರರ ಮಿತಿಮೀರಿದ ದೌರ್ಜನ್ಯ

— ಕಾರ್ಮಿಕರ ಬಗ್ಗೆ ಅತ್ಯಂತ ಹೇಯವಾದ ನಡತೆ —

ದೊಡ್ಡಬಳ್ಳಾಪುರದ ಸಾಹುಕಾರ್ ಬಿ. ಕೆ. ಅರಸಪ್ಪನವರು ಹಿಂದಿನ ತಿಂಗಳಿನಲ್ಲಿ ಮೂರು ಜನ ನಿರಪರಾಧಿ ಕಾರ್ಮಿಕರನ್ನು ಮನಸ್ಸೇಚ್ಛೆ ಹೊಡೆದಿದ್ದು ಪೋಲೀಸರಿಗೆ ಫಿರ್ಯಾದಾಗಿತ್ತು. ಮತ್ತೆ ಈ ತಿಂಗಳು ಅಂದರೆ 18—6—58ರಂದು ಅವರಲ್ಲಿ ಗುಮಾಸ್ತೆ ಕೆಲಸದಲ್ಲಿರುವ ವೇಣುಗೋಪಾಲ ಭಟ್ಟರನ್ನು ಸೀರೆ ಸರಿಯಾಗಿ ಮಡಕೆ ಹಾಕಲಿಲ್ಲವೆಂಬ ನೆಪದಿಂದ ಬಿ. ಕೆ. ಮಲ್ಲಪ್ಪನವರು ಕಪಾಳಕ್ಕೆ ಹೊಡೆದರೆಂದೂ ಸಂಘಕ್ಕೂ ಮತ್ತು ಪೋಲೀಸಿಗೂ ದೂರು ಕೊಟ್ಟಿರುತ್ತಾರೆಂದು ಗೊತ್ತಾಗಿದೆ. ಇದೇ ಜೂನ್ ತಿಂಗಳು ತಾ. 23—6—58ನೇ ಸೋಮವಾರ ಸದರಿ ಸಾಹುಕಾರ್ ಬಿ. ಕೆ. ಅರಸಪ್ಪನವರು ದೊಡ್ಡಬಳ್ಳಾಪುರದ ಚರಿತ್ರೆಯಲ್ಲಿ ಎಂದೂ ನಡೆಯದಂಥ ಅಮಾನುಷ ಕೃತ್ಯವನ್ನು ನಡೆಸಿರುತ್ತಾರೆಂದು ತಿಳಿದುಬಂದಿದೆ. ತಮ್ಮ ಫ್ಯಾಕ್ಟರಿಯಲ್ಲಿ ಸುಮಾರು ಹತ್ತು ವರ್ಷಗಳಿಂದ ಕೆಲಸ ಮಾಡುತ್ತಿದ್ದ ಕಾರ್ಮಿಕನೊಬ್ಬನನ್ನು ಕಲಾಬತ್ತು ಕದ್ದಿದ್ದಾನೆಂದು ಹೊಡೆದು ಬಡಿದು ಫ್ಯಾಕ್ಟರಿ ಮುಂಭಾಗದಲ್ಲಿ ಪಬ್ಲಿಕ್ ರಸ್ತೆಯಲ್ಲಿ ಮೇಜೊಂದನ್ನ ಹಾಕಿ ಅದರ ಮೇಲೆ ಬೆಳಗ್ಗೆ 9 ಘಂಟೆಯಿಂದ ಮಧ್ಯಾಹ್ನ 3 ಘಂಟೆ ವರೆಗೆ ಉಟ್ಟಿದ್ದ ಪಂಚೆ ಬಿಚ್ಚಿಸಿ ಆತನ ಕೊರಳಿಗೆ ಕಲಾಬತ್ತು ಲಾಡಿಗಳನ್ನು ಸುತ್ತಿ ನಿಕ್ಕರನೊಳಗೆ ಇಳಿಬಿಟ್ಟು ನಿಲ್ಲಿಸಿ ಅನೇಕ ಅವರ ಹಿಕ್ಕೈಸಿಗಳನ್ನ ಕರೆಸಿಕೊಂಡು ತೋರಿಸಿ ತಮಾಷಾದಲ್ಲಿ ತೊಡಗಿದ್ದರಂತೆ. ಸಹಸ್ರಾರು ಜನಗಳು ಸುಮಾರು ಈ ದೃಶ್ಯವನ್ನ ನೋಡಿಕೊಂಡು ಹೋಗುತ್ತ ಕೆಲವರು ಇಂಥಾ ಕಳ್ಳರಿಗೆ ಇದೇ ಸರಿ ಅಂತಲೂ, ಕೆಲವರು ಕಳ್ಳತನ ಮಾಡಿದಾಕ್ಷಣ ಈ ರೀತಿ ಪಬ್ಲಿಕ್ ರಸ್ತೆಯಲ್ಲಿ ಮೇಜಿನ ಮೇಲೆ ನಿಲ್ಲಿಸಿ ಅಪಮಾನಗೊಳಿಸುವುದು ತೀರಾ ಅನ್ಯಾಯ, ದೌರ್ಜನ್ಯ ಅಂತಲೂ, ಕೆಲವರು ಕಾಂಗ್ರೆಸ್ ಮುಖಂಡರಪ್ಪ, ದೊಡ್ಡ ದೊಡ್ಡ ಮುಖಂಡರುಗಳೆಲ್ಲಾ ಇವರ ಮನೆಗೆ ಬಂದು ಆತಿಥ್ಯ ಹೊಂದಿ ಹೋಗುತ್ತಾರೆ. ಅವರದೇ ಸರಕಾರ, ಏನು ಬೇಕಾದರೂ ಮಾಡಬಹುದು. ಇನ್ನು ಕೆಲವರು ಇವರೇನು ಮಹಾ ಮುನಿಸಿಪಾಲಿಟಿಗೆ ಸುಂಕ ಕೊಡದೆ ಕಳ್ಳತನದಲ್ಲಿ ರೇಷ್ಮೆ ಸಾಗಿಸುತ್ತಿಲ್ಲವೇ ಅಂತಲೂ, ಪ್ರಜಾ ಸರ್ಕಾರ, ಎಲ್ಲರೂ ಸ್ವತಂತ್ರರು, ಯಾರು ಏನು ಬೇಕಾದರೂ ಮಾಡಬಹುದು ಅಂತಲೂ ಅಂದುಕೊಂಡು ಹೋಗುತ್ತಿದ್ದರಂತೆ. ಆ ಕೆಲಸಗಾರನ ಪತ್ನಿಯವರೂ ಹೋಗಿ ಗೋಳಿಟ್ಟರೂ ಸಾಹುಕಾರರಿಗೆ ಆತನನ್ನು ಕೆಳಗಿಳಿಸಲು ಕನಿಕರ ಹುಟ್ಟಲಿಲ್ಲವಂತೆ. ಸುಮಾರು ಮಧ್ಯಾಹ್ನ ಒಂದು ಘಂಟೆ ವೇಳೆಗೆ ಪೋಲೀಸು ಇನ್ಸ್‌ಪೆಕ್ಟರರಿಗೆ ಸಮಾಚಾರ ತಿಳಿದು, ಅವರು ಸ್ಥಳಕ್ಕೆ ಪೋಲೀಸರನ್ನು ಕಳಿಸುವ ವೇಳೆಗೆ ಕಾರ್ಮಿಕನನ್ನು ಕೆಳಕ್ಕೆ ಇಳಿಸಿ ರೂಮಿನೊಳಗೆ ಕೂಡಿಸಿಕೊಂಡಿದ್ದರು. ಕ್ರಮ ಜರಗುತ್ತದೆಯೆಂದು ತಿಳಿದುಬಂದಿದೆ.

ವೈಸ್‌ಪ್ರೆಸಿಡೆಂಟರ ಚುನಾವಣೆ

(೭ನೇ ಪುಟದಿಂದ)

ರಾವ್‌ರವರೂ ಸ್ಪರ್ಧಿಸಿ ಕಾರ್ಮಿಕ ಹಿತೈಷಿ ಶ್ರೀ ಕೆ. ವೇದಮೂರ್ತಿಯವರು ಬಹುಮತ ಪಡೆದು ವಿಜಯಿಗಳಾದರು. ನೂತನ ಉಪಾಧ್ಯಕ್ಷರಿಗೆ ದೊಡ್ಡಬಳ್ಳಾಪುರ ಪವರ್ ಲೂಂ ಕಾರ್ಮಿಕರ ಸಂಘದ ಪರವಾಗಿ ಶ್ರೀ ಯಂ. ನಾರಾಯಣಪ್ಪನವರು ಹೂ ಹಾರವನ್ನರ್ಪಿಸಿ ಶುಭಕೋರಿದರು.

ದೊಡ್ಡಬಳ್ಳಾಪುರಕ್ಕೆ

ಮೈಸೂರು ರಾಜ್ಯ ಲೇಬರ್ ಕಮೀಷರ್ನರವರ ಭೇಟಿ

ತಾ. 26—6—1958ನೇ ಗುರುವಾರ ಬೆಳಿಗ್ಗೆ 11 ಘಂಟೆಗೆ ಲೇಬರ್ ಕಮೀಷರ್ನರವರು ದೊಡ್ಡಬಳ್ಳಾಪುರದ ಪ್ರವಾಸಿ ಮಂದಿರಕ್ಕೆ ಆಗಮಿಸಿದ್ದರು. ಪವರ್ ಲೂಂ ಕಾರ್ಮಿಕರ ಸಂಘದ ಅಧ್ಯಕ್ಷರಾದ ಹೆಚ್. ಮುಗುವಾಳಪ್ಪನವರು, ಸಂಘದ ಕಾರ್ಯದರ್ಶಿಗಳಾದ ಡಿ. ವಿ. ಗಂಗಾಧರರವರು, ಭಗವಂತಯ್ಯನವರು ಮತ್ತು ಇತರೇ ಸಮಿತಿ ಸದಸ್ಯರುಗಳು ಮುಂಚಿತವಾಗಿ ಹೋಗಿದ್ದು ಅವರು ಬಂದ ಕೂಡಲೇ ಸಂಘದ ಪರವಾಗಿ ಹಾರವನ್ನರ್ಪಿಸಿದರು. ಲೇಬರ್ ಕಮೀಷರ್ನರವರು ಮತ್ತು ಅಸಿಸ್ಟೆಂಟ್ ಕಮೀಷನರ್ ಅವರು ಸುಮಾರು ಒಂದೂವರೆ ಘಂಟೆಗಳ ಕಾಲ ಸಂಘದ ಸದಸ್ಯರೊಡನೆ ಚರ್ಚಿಸಿ, ಟವನಿನ ಕಾರ್ಮಿಕರ ಎಲ್ಲಾ ಕುಂದು ಕೊರತೆಗಳನ್ನು ವಿಮರ್ಶೆ ಮಾಡಿ ಆದಷ್ಟು ಜಾಗ್ರತೆ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಂಡು ಪರಿಹರಿಸಿಕೊಡುವದಾಗಿ ಭರವಸೆಕೊಟ್ಟರು. ಮಧ್ಯಾನ್ಹದ ಮೇಲೆ ಊರಿನೊಳಕ್ಕೆ ಬಂದು ಅನೇಕ ಮುಖ್ಯ ಫ್ಯಾಕ್ಟರಿಗಳಿಗೆ ಭೇಟಿಕೊಟ್ಟು ಕಾರ್ಮಿಕರ ಕುಂದು ಕೊರತೆಗಳನ್ನು ವಿಚಾರ ಮಾಡಿದರು.

ಓಬಳಾಪುರ ರೈತರ ಸಭೆ

ನೆಲಮಂಗಲ ತಾಲ್ಲೂಕು ಓಬಳಾಪುರ ರೈತರ ಸಭೆಯು, ದೊಡ್ಡಬಳ್ಳಾಪುರ ತಾಲ್ಲೂಕು ರೈತ ಸಂಘದ ಅಧ್ಯಕ್ಷರಾದ ಮುಗುವಾಳಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಅನೇಕ ಗ್ರಾಮಗಳ ರೈತರು ಸೇರಿದ್ದರು. ಅಧ್ಯಕ್ಷರು ರೈತ ಸಂಘಗಳ ಬೆಳವಣಿಗೆ, ತಾಲ್ಲೂಕುಗಳಿಂದ ತಾಲ್ಲೂಕಿಗೆ ಹಬ್ಬುತ್ತಿರುವ ರೈತ ಚಳುವಳಿ, ಜಾಗೃತಿಗಳನ್ನು ತಿಳಿಯಪಡಿಸಿ, ಭಾರತದ ಯಾವ ಪ್ರದೇಶವೇ ಆಗಲಿ, ಕಾಂಗ್ರೆಸ್ ಆಳ್ವಿಕೆಯಲ್ಲಿ ಪುನಶ್ಚೇತನ ಹೊಂದಲಿಲ್ಲವೆಂದೂ ಗೋಮಾಳ ಹಂಚುವಿಕೆಯಲ್ಲಿ ಓಬಳಾಪುರದ ರೈತರಿಗಾದ ಅನ್ಯಾಯದ ವಿರುದ್ಧ ಹೋರಾಡಲು ಬಲವಾದ ಸಂಘಟನೆಯ ಅವಶ್ಯಕತೆಯನ್ನು ಒತ್ತಿ ಹೇಳಿದರು. ಸಭೆಯನ್ನುದ್ದೇಶಿಸಿ ಡಿ. ವಿ. ಗಂಗಾಧರ್, ಸಿ. ರಾಮಭದ್ರಯ್ಯ ಇವರು ಮಾತನಾಡಿದರು. ಕೇರಳದ ಪ್ರಗತಿಗಾಮಿ ಸುಧಾರಣೆಗಳನ್ನು ವಿವರಿಸಲಾಯಿತು. ಇತರ ಕಾರ್ಯಕರ್ತರುಗಳಾದ ರಾಮಕೃಷ್ಣಯ್ಯ, ಬೈರಹನುಮೇ ಗೌಡ ಹಾಜರಿದ್ದರು. ಗ್ರಾಮಾಧ್ಯಕ್ಷರಾದ, ಹನುಮಂತಪ್ಪನವರು ವಂದನಾರ್ಪಣೆ ಮಾಡಿದರು. ಶ್ರೀ ರಾಮೇ ಗೌಡರು ಸಭೆಯ ವ್ಯವಸ್ಥೆಯನ್ನು ಏರ್ಪಡಿಸಿದ್ದರು.

ಮಾಲೀ ಮರಿಯಪ್ಪನವರ ಪ್ರಭೇದ ನೀತಿ

ಮಧುಗಿರಿ ತಾಲ್ಲೂಕು ಸೂರನಾಗೇನಹಳ್ಳಿ, ಕಂಸಾನಹಳ್ಳಿ, ಮತ್ತಿತರ ಜೋಡಿ ಗ್ರಾಮಗಳಲ್ಲಿ ರೈತ ಸಂಘವನ್ನು ಸ್ಥಾಪಿಸಿ, ರೈತರನ್ನು ಸಂಘಟಿಸಿ, ರೈತ ಕಾರ್ಯಕರ್ತರಾದ ಪಿ. ನಾರಾಯಣ ರೆಡ್ಡಿಯವರು ಹೋರಾಟಗಳನ್ನು ನಡೆಸುತ್ತಿದ್ದರು. ಮಾಲಿ ಮರಿಯಪ್ಪನವರು ಇದೇ ಜೋಡಿ ಗ್ರಾಮಗಳಲ್ಲಿನ ವ್ಯವಹಾರಗಳಲ್ಲಿ ಕೈಹಾಕಿ ಇದರಿಂದ ಕಮ್ಯೂನಿಸ್ಟರ ಪ್ರಭಾವ ಬೆಳೆಯುತ್ತದೆಯೆಂದೂ ಅದಾಗಕೂಡದೆಂದೂ ಪಣತೊಟ್ಟಿದ್ದರು ಆಗಾಗ ಖಾಜಿ ಪಂಚಾಯ್ತಿ ನಡೆಸುತ್ತಿದ್ದರು. ಆದರೂ ರೈತರ ಪರವಾಗಿ ನಾರಾಯಣ ರೆಡ್ಡಿಯವರೂ ಜೋಡಿದಾರರ ಪರವಾಗಿ ಮಾಲಿ ಮರಿಯಪ್ಪನವರೂ ತಾ. 28—4—58ನೇ ದಿನ ಸೂರನಾಗೇನಹಳ್ಳಿ ಜೋಡಿ ಗ್ರಾಮದಲ್ಲಿ ಪಂಚಾಯ್ತಿ ನಡೆಸಿದರು. ಮಾಲಿ ಮರಿಯಪ್ಪನವರಿಗೆ ಅರ್ಜೆಂಟ್ ತುಮಕೂರಿಗೆ ಹೋಗಬೇಕಾದ್ದರಿಂದ ಪಂಚಾಯ್ತಿ ಅರ್ಧಂಬರ್ಧವಾಯಿತು. ಈಗ ಜೋಡಿದಾರರು ಪಂಚಾಯ್ತಿ ಮಾಡಿಕೊಳ್ಳುವಂತಿಲ್ಲ. ರೈತರು ಗುಂಪುಗಳನ್ನು ಕಟ್ಟಿಕೊಂಡು ಹೊಡೆದಾಟಕ್ಕೆ ನಿಲ್ಲುವ ಸಂಭವವಿದೆ. ಮಾಲಿ ಮರಿಯಪ್ಪನವರಿಗೆ ಪುರುಸೊತ್ತಿಲ್ಲ, ಪುರುಸೊತ್ತು ದೊರಕಿದಾಗ ಬಂದು ಪಂಚಾಯ್ತಿ ಮಾಡುತ್ತಾರಂತೆ. ಇದು ಸಾಧ್ಯವೆ? ರೈತರು ಅದುವರೆಗೂ ಸಾಗುವಳಿ ನಡೆಸಬಾರದೆಂದು ಅವರ ಅರ್ಥವೇನೋ. ಹೀಗೆಯೇ ಶ್ರೀಯುತರು ರೈತರ ನಿತ್ಯ ವ್ಯವಹಾರಗಳಲ್ಲಿ ಅರ್ಧಂಬರ್ಧ ಕೈಹಾಕಿ ಯಾವುದನ್ನೂ ಪೂರ್ತಿಯಾಗಿಸದೆ ಇಲ್ಲಿಯ ರೈತರಲ್ಲಿ ಅಸಮಾಧಾನ ಅಸಂತೃಪ್ತಿಗಳು ದಿನೇದಿನೇ ಬೆಳೆಯುತ್ತಿವೆಯಲ್ಲದೆ ರೈತರ ಸಂಘಟನೆ ಅತ್ಯಂತ ಬಲವಾಗಿ ಬೆಳೆಯುತ್ತಿದೆ.

ರೈತ—ಕಾರ್ಮಿಕರ ಒಗ್ಗಟ್ಟಿಗೆ ಕರೆ

ಮೈಸೂರಿನಲ್ಲಿ ಬಹಿರಂಗ ಸಭೆ

ಕಮ್ಯೂನಿಸ್ಟ್ ಪಕ್ಷದ ಮೈಸೂರು ಜಿಲ್ಲಾ ಸಮಿತಿಯು ತಾ. 28—6—'58 ರಂದು ಸಭೆಸೇರಿ ಪಾರ್ಟಿಯ ಶಕ್ತಿಯನ್ನು ಬಲಪಡಿಸಲು ಕಾರ್ಯಕ್ರಮಗಳನ್ನು ತೀರ್ಮಾನ ಮಾಡಿತು ಮತ್ತು ಜೂಲೈ ತಿಂಗಳ ಅಂತ್ಯದಲ್ಲಿ ಜಿಲ್ಲಾ ಪಾರ್ಟಿ ನಿಧಿಗಾಗಿ 500 ರೂಪಾಯಿಗಳನ್ನು ಸಂಗ್ರಹಿಸತಕ್ಕದೆಂದೂ ತೀರ್ಮಾನಿಸಲಾಯಿತು. ಸಭೆಯಲ್ಲಿ ಕಾ॥ ಎಂ. ಸಿ. ನರಸಿಂಹನ್ ಮತ್ತು ಕಾ॥ ಬಿ. ವಿ. ಕಕ್ಕಿಲ್ಲಾಯರು ಹಾಜರಿದ್ದು ಮಾರ್ಗದರ್ಶನ ಮಾಡಿದರು.

ಇದೇ ದಿನ ಸಂಜೆ ಟೌನ್ ಹಾಲ್ ಮೈದಾನದಲ್ಲಿ ಕಾ॥ ಎಂ. ಸಿ ನರಸಿಂಹನ್‌ರವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು. ಕಾ॥ ಬಿ. ವಿ. ಕಕ್ಕಿಲ್ಲಾಯರು ಅಮೃತಸರ ಪಾರ್ಟಿ ಅಧಿವೇಶನದಲ್ಲಾದ ತೀರ್ಮಾನಗಳನ್ನು ತಿಳಿಸಿದರು. ಕಾ॥ ನರಸಿಂಹನ್‌ರವರು ಭಾಷಣ ಮಾಡಿ ಮೈಸೂರು ರಾಜ್ಯದಲ್ಲಿ ಸರ್ಕಾರಗಳು ಸುಭದ್ರವಾಗದಿರುವುದಕ್ಕೆ ಕಾರಣಗಳನ್ನು ತಿಳಿಸಿ ಜನತೆ ಹೇಗೆ ದೇಶದ ಅಭಿವೃದ್ಧಿಗಾಗಿ ಒಗ್ಗಟ್ಟಾಗಬೇಕೆಂದೂ ಅದಕ್ಕೆ ಈಗ ನಿಜವಾಗಿ ತ್ಯಾಗ ಮಾಡುತ್ತಿರುವ ಕೂಲಿಕಾರ ಮತ್ತು ರೈತವರ್ಗಗಳು ಸಂಘಟಿತರಾಗಬೇಕೆಂದೂ ಕರೆಕೊಟ್ಟರು,

ಕೊಳ್ಳೆಗಾಲದಲ್ಲಿ—

ಉಪವಾಸ ಮುಷ್ಕರ

ತಾ. 20—6—58ರಂದು ಕೊಳ್ಳೆಗಾಲದ ಗವರ್ನ್‌ಮೆಂಟ್ ಸಿಲ್ಕ್ ಫ್ಯಾಕ್ಟರಿಯ ಮುಂಭಾಗದಲ್ಲಿ ಸಂಘದ ಕಾರ್ಯದರ್ಶಿ ಅಚ್ಚುತನ್‌ರವರು ಉಪವಾಸ ಮುಷ್ಕರ ಹೂಡಿದ್ದರು. ತಾ. 21-6-58 ರಲ್ಲಿ ಇನ್‌ಛಾರ್ಜ್ ಅಸಿಸ್ಟೆಂಟ್ ಲೇಬರ್ ಕಮೀಷನರ್‌ರವರು ಛಾರ್ಜು ವಹಿಸಿದ ಕೂಡಲೇ ಕೆಲಸಗಾರರ ಬೇಡಿಕೆಗಳಿಗೆ ಪಂಚಾಯಿತಿ ನಡೆಸುವುದಾಗಿ ಆಶ್ವಾಸನೆಯಿತ್ತುದರಿಂದ ಆ ದಿನ ಸಂಜೆಗೆ ಉಪವಾಸ ಮುಷ್ಕರವನ್ನು ನಿಲ್ಲಿಸಿದರು.

ತೃತೀಯ ಉಪಗ್ರಹದಿಂದ ಸುದ್ದಿ ಹೇಗೆ ಬರುತ್ತಿದೆ ?

(೫ನೇ ಪುಟದಿಂದ)

ಸ್ಥಿಯು ನಿಯಂತ್ರಿಸುತ್ತದೆ. ವಿಭಿನ್ನ ಯೋಜನೆಗಳಿಂದ ಅಳತೆ ಮಾಡಲಾದ ವಿಶ್ವಕಿರಣಗಳ ತೀವ್ರತೆಯನ್ನು, ಸಂಕೇತಗಳ ಕಂಪನ ಗತಿಯು ಬದಲಾವಣೆಗಳಿಂದ ನಿರ್ಣಯಿಸಲಾಗುತ್ತದೆ.

"ಮಯಾಕ್" ಪ್ರೇಷಕ ಯಂತ್ರವು ಕಳಿಸಿದ ದಾಖಲೆಗಳ ಪರಿಶೀಲನೆಯ ಪರಿಣಾಮವಾಗಿ, ಸೌರವಿದ್ಯುತ್ಕೋಶಗಳೂ, ವಿಶ್ವಕಣ ಮತ್ತು 'ಫೊಟೋಸ್' ಗಣಕ ಯಂತ್ರಗಳೂ ಸರಿಯಾಗಿ ಕೆಲಸ ಮಾಡುತ್ತಿವೆಯೆಂದು ಕಂಡು ಬಂದಿದೆ. ಉಲ್ಕೆಗಳ ಹೊಡೆತದಿಂದ ಉಂಟಾಗುವ ಸವೆತಕ್ಕೆ ಸಿಕ್ಕಿ ಸೌರವಿದ್ಯುತ್ಕೋಶಗಳು ಕೆಲಸ ನಿಲ್ಲಿಸದಿದ್ದ ಪಕ್ಷದಲ್ಲಿ, ಈ ಪ್ರೇಷಕ ಯಂತ್ರವು ಇನ್ನೂ ಕೆಲಕಾಲದ ವರೆಗೆ ಕೆಲಸ ಮಾಡುತ್ತಿರುವುದೆಂದು ನಿರೀಕ್ಷಿಸಲಾಗಿದೆ.

"ಮಯಾಕ್" ಬಾನುಲಿ ಮಾರ್ಗದಿಂದ ಪ್ರೇಷಿತವಾದ ಆಧಾರಾಂಶಗಳು ದೀರ್ಘ ಕಾಲದ ವರೆಗೆ, ಅನೇಕ ಸಮೀಕ್ಷಕರಿಂದ ದಾಖಲೆಗೊಳಿಸಲ್ಪಟ್ಟ ಪಕ್ಷದಲ್ಲಿ, ಅವು ವೈಜ್ಞಾನಿಕವಾಗಿ ಅತ್ಯಂತ ಅಮೂಲ್ಯವಾಗಿರುವುವು. ಆದುರಿಂದಲೇ ವಿಶ್ವಕಿರಣ ಪ್ರಸಾರಣ, ಮತ್ತು ವಿಶೇಷತಃ ಚೈತನ್ಯ ಪ್ರಮಾಣದಲ್ಲಿ ವಿಶ್ವಕಣಗಳ ವಿತರಣೆಯ,— ವೈವಿಧ್ಯತೆಗಳ ಪರಿಶೀಲನೆಗಾಗಿ, ಸಾಧ್ಯವಾದಷ್ಟು ಕರಾರುವಾಕ್ಕಾಗಿ ಸಕಾಲದಲ್ಲಿ (ಹಲವು ಸೆಕಂಡುಗಳ ವರೆಗೆ) ದಾಖಲೆಗಳನ್ನು ಸ್ಥಾನನಿರ್ದೇಶಗೊಳಿಸಬೇಕು, ಈ ದಾಖಲೆಗಳು ನಿರಂತರವಾಗಿ ನಡೆಯಬೇಕು; ವಿಶ್ವಕಣಗಳ ಮತ್ತು ಫೋಟೋಸ್ ಎಣಿಕೆ ಯಂತ್ರಗಳ ಚಲಾವಣೆಯ ಬಗ್ಗೆಯೂ ವಿಭಿನ್ನ ಲಕ್ಷಾಂಶಗಳ ಮೇಲಿರುವ ಪರಮಾಧಿಕ ಸಂಖ್ಯೆಯ ಸ್ಥಾನಗಳಿಂದ ಸಮಾಚಾರವನ್ನು ಸಂಗ್ರಹಿಸಬೇಕು. ಉಪಗ್ರಹವು ಭೂಮಿಯ ನೆರಳಿನಲ್ಲಿ ಹಾದು ಹೋಗುತ್ತಿರುವಾಗಿನ ವಿಶ್ವಕಿರಣಗಳಿಗೆ ಸಂಬಂಧಿಸಿದ ಆಧಾರಾಂಶಗಳು ವಿಶೇಷ ಉಪಯುಕ್ತವಾಗಿರುತ್ತವೆ. ಪ್ರಸ್ತುತ ಸಮಯದಲ್ಲಿ ಇಂತಹ ಸಮೀಕ್ಷೆಗಳಿಗೆ ಅನುಕೂಲಕರವಾದ ಪರಿಸ್ಥಿತಿಗಳು ಭೂಮಿಯ ದಕ್ಷಿಣಾರ್ಧಗೋಳದಲ್ಲಿ—ಎಂದರೆ ದಕ್ಷಿಣ ಧ್ರುವಮಂಡಲ, ಆಸ್ಟ್ರೇಲಿಯಾ, ದಕ್ಷಿಣ ಅಮೆರಿಕಾ ಮತ್ತು ದಕ್ಷಿಣ ಆಫ್ರಿಕಾ ಪ್ರದೇಶಗಳಲ್ಲಿ—ಕಂಡು ಬರುತ್ತದೆ.

[ಮುಂದಿನ ವಾರ : ಉಪಗ್ರಹವು ತನ್ನ ಗ್ರಹಪಥದಲ್ಲಿಯೆ ಏಕೆ ಸುತ್ತುತ್ತದೆ ?]

ಸಂಪಾದಕರಿಗೆ ಪತ್ರಗಳು

ಪಾನ ಪ್ರತಿಬಂಧದ ಬಗ್ಗೆ ಕಾಂಗ್ರೆಸ್ಸಿಗರ ಎರಡು ನೀತಿ

"ನಮ್ಮ ಸರಕಾರದ ಪಾನ ಪ್ರತಿಬಂಧ ಧೋರಣೆಯು ಅಯಶಸ್ವಿಯಾಗಿದೆ. ಪೋಲೀಸ ಕಚೇರಿಗಳ ಎದುರಿಗೆ ದಾರು (ಕಳ್ಳಿ ಸೆರೆ) ಮಾರಾಟವಾಗುತ್ತಿದೆ. ಪಾನ ಪ್ರತಿಬಂಧವಿಲ್ಲದಾಗ ಕುಡಿಯುವ ಚಟವಿಲ್ಲದವರೂ ಈಗ ಕುಡಿಯುತ್ತಿದ್ದಾರೆ. ಮನೆಗಳಲ್ಲೆಲ್ಲ ದಾರು ಸಿಗುತ್ತಿದೆ" ಎಂದು ಮೈಸೂರು ಅಸೆಂಬ್ಲಿಯ ಸ್ಪೀಕರರಾದ ಶ್ರೀ ಎಸ್. ಆರ್. ಕಂಠಿಯವರು ಬಿಜಾಪುರದಲ್ಲಿ ಸೇರಿದ್ದ ಅಖಿಲ ಮೈಸೂರು ೧ನೇ ಲಮಾಣಿ ಪರಿಷತ್ತಿನ ಅಧ್ಯಕ್ಷ ಸ್ಥಾನದಿಂದ ಭಾಷಣ ಮಾಡಿದರು.

ಈ ಪರಿಷತ್ತನ್ನು ಉದ್ಘಾಟನೆ ಮಾಡುತ್ತ ಮಾಜಿ ಮುಖ್ಯ ಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು "ಲಮಾಣಿ ಜನರಷ್ಟೇ ಅಲ್ಲ, ಲಿಂಗಾಯತ ಮತ್ತು ಬ್ರಾಹ್ಮಣರ ಮನೆಗಳಲ್ಲಿ ಭಟ್ಟಿ ಸೆರೆ ತಯಾರಾಗುತ್ತಿದೆ ಎಂದು ಜನರು ಹೇಳುತ್ತಿರುವರು. ಯಾಕಂದರೆ ಪೋಲೀಸರಿಂದ ಇಂಥವರ ಮೇಲೆ ಸಂಶಯ ಬರುವುದಿಲ್ಲ. ಇವರೆಲ್ಲ ಕುಡಿಯದಿದ್ದರೂ ಹಣ ಗಳಿಸುವುದರ ಸಲುವಾಗಿ ಈ ದಂಧೆ ಮಾಡುತ್ತಿರಬಹುದು" ಎಂದು ಹೇಳಿದರು.

ಕಾಂಗ್ರೆಸ್ ಸರಕಾರದ ಪಾನಪ್ರತಿಬಂಧ ನೀತಿ ಅಯಶಸ್ವಿಯಾಗಿದೆ, ಭಟ್ಟಿ ಸೆರೆ ಮಾರಾಟದಲ್ಲಿ ಮತ್ತು ತಯಾರಿಸುವುದರಲ್ಲಿ ಪೋಲೀಸರ ಕೈವಾಡವಿದೆ, ಪಾನ ಪ್ರತಿಬಂಧ ಧೋರಣೆಯನ್ನು ಸರಕಾರದವರು ಪುನರ್ವಿಮರ್ಶೆ ಮಾಡಬೇಕು ಅಥವಾ ಅದನ್ನು ಬಿಗುಗೊಳಿಸಬೇಕೆಂದು ಇಷ್ಟು ದಿವಸ ವಿರೋಧಿ ಪಕ್ಷದವರು ದೂರಿಕೊಂಡಾಗ ಅಧಿಕಾರದಲ್ಲಿದ್ದ ಕಾಂಗ್ರೆಸ ಮಂತ್ರಿಗಳು "ವಿರೋಧ ಪಕ್ಷದವರಿಗೆ, ನಮ್ಮ ಧೋರಣೆಯನ್ನು ಟೀಕಾ ಮಾಡುವುದೊಂದೇ ಕೆಲಸ. ಕಾಂಗ್ರೆಸ್ಸಿನ ಪಾನ ಪ್ರತಿಬಂಧ ಯೋಜನೆ ಅತ್ಯಂತ ಯಶಸ್ವಿಯಾಗಿದೆ" ಎಂದು ಹೇಳುತ್ತಿದ್ದು, ಕುರ್ಚಿ ಬಿಟ್ಟು ಹೊರಗೆ ಬಂದ ಕೂಡಲೇ ಅದೇ ಮಂತ್ರಿಗಳು ವಿರೋಧಿ ಪಕ್ಷದವರ ಶಬ್ದಗಳನ್ನೇ ಆಡುತ್ತಿರುವರಲ್ಲ? ಅಧಿಕಾರದಲ್ಲಿದ್ದಾಗ ಸಮರ್ಥನೆ ಮಾಡಿಕೊಳ್ಳುವುದೂ, ಅಧಿಕಾರ ಬಿಟ್ಟಾಗ ಟೀಕಿಸುವುದೂ, ಕಾಂಗ್ರೆಸ್ಸಿನ ಯಾವ ಕಾರ್ಯಕ್ರಮದಲ್ಲಿದೆ ?

ಎನ್ಕೇಯೂ, ಬಿಜಾಪುರ

ವಾರಗಾರ ರೈತರ ಮೇಲೆ ತಾಸಿಲ್‌ದಾರರ ಧಾಳಿ

ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೋಕು ತಾಸಿಲ್‌ದಾರರಿಗೆ, ವಾರಗಾರ ರೈತರನ್ನು ಮರ್ದಿಸಲು ರೈತ ಆರ್ಡಿನೆನ್ಸ್ ಒಂದು ಆಯುಧವಾಗಿದೆ. ಆರ್ಡಿನೆನ್ಸಿನಿಂದ ಒಂದಿಷ್ಟು ರಕ್ಷಣೆ ಸಿಗುವುದೆಂಬ

(೯ನೇ ಪುಟ ನೋಡಿ)

ನಾರದ ವಾರ್ತಾ ಸಮೀಕ್ಷೆ

ಆಂಧ್ರ ವಿಧಾನ ಪರಿಷತ್ ಚುನಾವಣೆಯಲ್ಲಿ ಕೈಕೊಟ್ಟ ಕಾಂಗ್ರೆಸ್ಸಿಗರು

ಇತ್ತೀಚೆಗೆ ಆಂಧ್ರ ಪ್ರದೇಶ ವಿಧಾನ ಪರಿಷತ್ತಿಗೆ ಶಾಸನ ಸಭೆಯಿಂದ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ಸು ಎರಡು ಸ್ಥಾನಗಳಲ್ಲಿ ಪರಾಜಯ ಹೊಂದಿತು, ಅಲ್ಲದೆ ಇನ್ನೆರಡು ಸ್ಥಾನಗಳಲ್ಲಿ ನಿರೀಕ್ಷಿಸಿದಷ್ಟು ಮತ ದೊರೆಯದೆ ಹೋಯಿತು. ಕಾಂಗ್ರೆಸ್ ವ್ಹಿಪ್‌ರವರ ಆಜ್ಞೆಯನ್ನು ಕಾಂಗ್ರೆಸ್ ಸದಸ್ಯರು ಸರಿಯಾಗಿ ಪಾಲಿಸದುದೇ ಇದಕ್ಕೆ ಕಾರಣ. ತನಿಖೆ ನಡೆಸಲು ಪ್ರದೇಶ ಕಾಂಗ್ರೆಸ್ ಸಮಿತಿ ಒಂದು ಸಮಿತಿಯನ್ನು ರಚಿಸಿದೆ. ಇದು ನಡೆಯುತ್ತಿರುವುದು ಆಂಧ್ರದಲ್ಲಷ್ಟೇ ಅಲ್ಲ ಎಲ್ಲ, ರಾಜ್ಯಗಳಲ್ಲೂ ಕಾಂಗ್ರೆಸ್ ಶಾಸನ ಸಭಾಸದಸ್ಯರುಗಳು ಚುನಾವಣೆಯಲ್ಲಿ ಕೈಕೊಟ್ಟು, 'ಶಿಸ್ತನ್ನು' ಮುರಿದಿದ್ದಾರೆ.

ಕಾರ್ಮಿಕರ ನಡುವೆ ಕಮ್ಯೂನಿಸ್ಟರ ಪ್ರಾಬಲ್ಯ, ಇಂಟಕ್ ನಾಯಕರ ಗೋಳು

ಅಹಮದಾಬಾದ್‌ನಲ್ಲಿ ಇದೇ ತಿಂಗಳ 19ರಂದು ಇಂಟಕ್‌ನ ಕಾರ್ಯಕಾರೀ ಸಮಿತಿ ಸಭೆ ಸೇರಲಿದೆ. ಆ ಸಭೆಗೆ ಸದಸ್ಯರು ತಪ್ಪದೇ ಬರಬೇಕೆಂದು ಆಹ್ವಾನಿಸುವ ಪತ್ರದಲ್ಲಿ, ಪ್ರಧಾನ ಕಾರ್ಯದರ್ಶಿ ವಾಸವಾಡಾರವರು ಕಾರ್ಮಿಕ ವರ್ಗದ ನಡುವೆ ಎ.ಐ.ಟಿ.ಯು.ಸಿ ಪ್ರಾಬಲ್ಯ ಹೆಚ್ಚುತ್ತಿರುವುದನ್ನು ಕುರಿತು ಕುರುಬಿದ್ದಾರೆಂದು ತಿಳಿದುಬಂದಿದೆ.

ಅವರು ಪತ್ರದಲ್ಲಿ ದೇಶದಲ್ಲಿ ಕಮ್ಯೂನಿಸ್ಟರ "ಅವಾಂತರ" ದಿನೇ ದಿನೇ ಹೆಚ್ಚುತ್ತಿದೆಯೆಂದೂ, ಕಮ್ಯೂನಿಸ್ಟರೇ ಪ್ರಧಾನವಾಗಿರುವ ಅಖಿಲ ಬಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸು, ಕಾರ್ಮಿಕರ ಐಕ್ಯತೆ, ಸತ್ಯ ಮತ್ತು ಅಹಿಂಸೆಯ ವಿಚಾರ ಮಾತನಾಡುತ್ತ ತನ್ನ ಪ್ರಭಾವವನ್ನು ಬೆಳೆಸಿಕೊಳ್ಳಲು ಯತ್ನಿಸುತ್ತಿದೆಯೆಂದೂ ಮತ್ತು ಇದರ ಪರಿಣಾಮವಾಗಿ ಇಂಟಕ್ ಕೆಲಸಗಾರರಿಗೆ ಸರಿಯಾದ ಧೋರಣೆ ಅನುಸರಿಸಲು, ಮಾರ್ಗದರ್ಶನ ನೀಡಲು ಕಷ್ಟವಾಗಿದೆಯೆಂದೂ ತಿಳಿಸಿರುವುದಾಗಿ ಬಂದಿದೆ. ಅಷ್ಟೇ ಅಲದೆ ಅವರು ಕೆಲವು ರಾಜ್ಯ ಸರಕಾರಗಳು ಮತ್ತು ಕೇಂದ್ರ ಸರಕಾರದ ಸಚಿವಾಲಯಗಳೂ ಪ್ರತ್ಯಕ್ಷ ಪರೋಕ್ಷವಾಗಿ ಕಮ್ಯೂನಿಸ್ಟ್ ಸಂಘಗಳಿಗೆ ಉತ್ತೇಜನ ಕೊಡುತ್ತಿವೆಯೆಂದೂ ಅಪಾದಿಸಿದ್ದಾರೆ.

ಈ ಎಲ್ಲ ವಿಷಯ ಚರ್ಚಿಸಲು ಮತ್ತು ಸರಿಯಾದ ಧೋರಣೆ ಅನುಸರಿಸಲು ಕಾರ್ಯಕಾರಿ ಸಮಿತಿಯು ಸೇರಲಿದೆ. ಅಂದಮೇಲೆ ಇಂಟಕ್ ತನ್ನ ಐಕ್ಯಭಂಜಕ ನೀತಿಯನ್ನು ಮತ್ತಷ್ಟು ದೃಢವಾಗಿ ಅನುಸರಿಸುವುದು ಎಂದು ಅರ್ಥವಾಗುತ್ತದೆ!

ಆಹಾರ ಪರಿಸ್ಥಿತಿ ಹದಗೆಡುತ್ತಿದೆ

ಕೇಂದ್ರ ಆಹಾರ ಸಚಿವರು ಪತ್ರಿಕಾ ಸಮ್ಮೇಳನಗಳನ್ನು ಕರೆದು ದೇಶದ ಆಹಾರ ಪರಿಸ್ಥಿತಿಯ ಬಗ್ಗೆ ಕಳವಳಪಡುವಂಥದ್ದೇನಿಲ್ಲ, ಉತ್ತಮಗೊಳ್ಳುತ್ತಿದೆ, ಸರಕಾರವು ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದೆಲ್ಲ ಹೇಳುತ್ತಿದ್ದಾರೆ. ಆದರೆ ವಾಸ್ತವ ಪರಿಸ್ಥಿತಿಯು ಅದಕ್ಕೆ ವಿರುದ್ಧವಾಗಿದೆ. ಆಹಾರ ಧಾನ್ಯಗಳ ಬೆಲೆಯು ದಿನೇ ದಿನೇ ಹೆಚ್ಚುತ್ತಲೇ ಇದೆ. ಆಹಾರದ ಉತ್ಪಾದನೆಯಲ್ಲಿ ಸ್ವಯಂಪೂರ್ಣತೆ ಮುಟ್ಟಲಾಗುವುದು ಎಂದು ಹೇಳಿಕೊಳ್ಳುತ್ತಿದ್ದರು. 1958ರ ಮೊದಲ ಮೂರು ತಿಂಗಳಲ್ಲಿ ಭಾರತವು 100,000 ಟನ್ ಆಹಾರ ಧಾನ್ಯಗಳ ಬೆಲೆಯಲ್ಲಿ ವಾರವಾರಕ್ಕೂ ಅದರ ಒಟ್ಟು ಮಾರಾಟದ ಅಂಕೆಯು ಏರುತ್ತಲೇ ಇದೆ. ಜೂನ್ ತಿಂಗಳ ಮಧ್ಯ ಭಾಗದಲ್ಲಿ ಹೊರಬಿದ್ದಿರುವ ಅಂಕಿ ಅಂಶದಂತೆ ಅಂಕಿಯು 110.1 ರಿಂದ 111 9 ಕ್ಕೆ ಏರಿದೆ.

ಸಕ್ಕರೆ ರಫ್ತಿಗೆ ಉತ್ತೇಜನ

ರಾಷ್ಟ್ರಾಧ್ಯಕ್ಷರ ತುರ್ತು ಆಜ್ಞೆಯೊಂದು ಸಕ್ಕರೆ ರಫ್ತಿಗೆ ಉತ್ತೇಜನ ಕೊಡಲು ಹೊರಟಿದೆ. ಈ ತುರ್ತು ಆಜ್ಞೆಯ ಪ್ರಕಾರ 50,000 ಟನ್ ಸಕ್ಕರನೆಯನ್ನು ರಫ್ತು ಮಾಡಲಾಗುವುದು.

ಸರಕಾರ ತಿಳಿಸಿರುವಂತೆ ಈರೀತಿ ರಫ್ತಿಗೆ ಉತ್ತೇಜನ ಕೊಡುವುದರಿಂದ ಹೊರದೇಶದಲ್ಲಿ ಅದರ ಬೆಲೆ ಹೆಚ್ಚುವುದಿಲ್ಲವೆಂದೂ ಆದರೆ ದೇಶಕ್ಕೆ ಅಗತ್ಯವಾಗಿ ಬೇಕಿರುವ ವಿದೇಶೀ ಹಣವನ್ನು ಅದು ಗಳಿಸುವುದೆಂದೂ ಹೇಳಲಾಗಿದೆ.

ದೇಶದಲ್ಲಿ ಪದಾರ್ಥಗಳ ಬೆಲೆಯನ್ನು ತಗ್ಗಿಸಲು ಸಮರ್ಥವಾಗಿರದ ಸರಕಾರ, ಅದನ್ನು ಹಾಗೆಯೇ ಇರಿಸಿ ರಫ್ತನ್ನು ಪ್ರೋತ್ಸಾಹಿಸುತ್ತಿದೆ. ವಿದೇಶೀ ವಿನಿಮಯ ಅಗತ್ಯವೆಂಬುದು ನಿಜವಾದರೂ, ದೇಶದಲ್ಲಿ ಬೆಲೆ ತಗ್ಗಿಸುವ ಸೂಚನೆ ಮಾತ್ರ ಮಾಡಲಾಗಿಲ್ಲ.

ರಫ್ತು ಕಾರ್ಯವನ್ನು ಸಕ್ಕರೆ ಮಾಲಿಕರ ಸಂಘವು ನಡೆಸುವುದು, ಮಣವೊಂದಕ್ಕೆ ಅವರಿಗೆ ಸರಕಾರ 0 50 ನಯಾಪೈಸೆಯಂತೆ ರಿಯಾಯಿತಿ ಕೊಡುವುದು. ಅಂದಮೇಲೆ ಈ ರಿಯಾಯಿತಿಯ ಲಾಭ ಕಾರ್ಖಾನೆ ಮಾಲಿಕರಿಗಷ್ಟೆ ಹೊರತು, ಸಾಮಾನ್ಯ ಜನತೆಗಲ್ಲ.

ನ್ಯೂಕ್ಲಿಯರ್ ಪ್ರಯೋಗಗಳ ಪತ್ತೆ ಬಗ್ಗೆ ಮಾತುಕತೆ ಆರಂಭ

ನ್ಯೂಕ್ಲಿಯರ್ ಪ್ರಯೋಗಗಳ ಪತ್ತೆಯ ವಿಷಯದಲ್ಲಿ ಪೂರ್ವ-ಪಶ್ಚಿಮ ರಾಷ್ಟ್ರಗಳ ನಡುವೆ ಜೂನ್ 30ರಂದು ಜಿನೀವಾದಲ್ಲಿ ಮಾತುಕತೆ ಆರಂಭವಾಗಿದೆ. ಸೋವಿಯತ್ ಯೂನಿಯನ್, ಅಮೇರಿಕ, ಬ್ರಿಟನ್, ಕೆನಡಾ, ಮತ್ತಿತರ ರಾಷ್ಟ್ರಗಳು ಈ ಮಾತುಕತೆಗಳಲ್ಲಿ ಭಾಗವಹಿಸುವವು.

ವಿಜ್ಞಾನಿಗಳು ಮತ್ತು ತಜ್ಞರುಗಳಿಂದ ಕೂಡಿದ ಈ ಸಮ್ಮೇಲನವು ಅಸ್ಫೋಟನೆಗಳ ಪತ್ತೆಯ ವಿಷಯವನ್ನು ಮಾತ್ರ ಚರ್ಚಿಸುತ್ತದೆ ಅಷ್ಟೆ. ಪ್ರಯೋಗಗಳನ್ನು ನಿಲ್ಲಿಸುವ ಅಥವಾ ನ್ಯೂಕ್ಲಿಯರ್ ಶಸ್ತ್ರಗಳನ್ನು ನಿಷೇಧಿಸುವ ಬಗ್ಗೆ ಸಲಹೆಯೊಯನ್ನೂ ಸಹ ಚರ್ಚಿಸುವುದಿಲ್ಲ.

ಸೋವಿಯತ್ ಯೂನಿಯನ್ ಈ ಸಮ್ಮೇಳನದಲ್ಲಿ ಪ್ರಯೋಗಗಳನ್ನು ನಿಲ್ಲಿಸುವ ಬಗ್ಗೆ ಮತ್ತು ಅಣುಶಸ್ತ್ರದ ನಿಷೇಧದ ಬಗ್ಗೆಯೂ ಚರ್ಚಿಸಬೇಕೆಂದು ಸೂಚನೆ ಮಾಡಿತ್ತು, ಆದರೆ ಪಶ್ಚಿಮ ರಾಷ್ಟ್ರಗಳು ಅದನ್ನು ತಿರಸ್ಕರಿಸಿದುವು.

ಈ ಸಮ್ಮೇಳನದ ಫಲಿತಾಂಶವು ಏನೇ ಆದರೂ, ಇದು ಮುಂದೆ ಪೂರ್ವ-ಪಶ್ಚಿಮ ರಾಷ್ಟ್ರಗಳು ಸೇರಿ ಮಾತುಕತೆ ನಡೆಸಲು, ಹಾಗೂ ಶೃಂಗ ಸಮ್ಮೇಳನಕ್ಕೆ ಹಾದಿ ಮಾಡಿ ಕೊಡಲು ಸಾಧ್ಯವಾಗಬಹುದು.

ಪೆಸಿಫಿಕ್ ಪ್ರದೇಶದಲ್ಲಿ ನ್ಯೂಕ್ಲಿಯರ್ ಪ್ರಯೋಗ ನಿಲ್ಲಿಸಲು ಅಮೆರಿಕದ ನಕಾರ

ವಿಶ್ವಸಂಸ್ಥೆಯ ಟ್ರಸ್ಟೀಷಿಪ್ ಕೌನ್ಸಿಲ್‌ನಲ್ಲಿ ಭಾರತವು ಫೆಸಿಫಿಕ್ ಸಾಗರ ಪ್ರದೇಶದಲ್ಲಿರುವ ದ್ವೀಪಗಳಲ್ಲಿ ಅಮೇರಿಕವು ನ್ಯೂಕ್ಲಿಯರ್ ಪ್ರಯೋಗಗಳನ್ನು ನಿಲ್ಲಿಸಬೇಕೆಂದು ನಿರ್ಣಯವನ್ನು ಮಂಡಿಸಿದ್ದಿತು. ಅಮೆರಿಕವು ಈ ಪ್ರದೇಶದಲ್ಲಿ ಪ್ರಯೋಗ ನಡೆಸುತ್ತಿರುವುದು ಏಷ್ಯದ ಜನತೆಯ ಹಿತಕ್ಕೆ ಭಾಧಕವಾಗಿದೆ ಎಂದು ತಿಳಿಸಿ, ನಿರ್ಣಯದ ಮೇಲೆ ಮಾತನಾಡುತ್ತ ಭಾರತದ ಪ್ರತಿನಿಧಿ ಆರ್ಥರ್ ಲಾಲ್‌ರವರು "ಅವರು (ಆ ಪ್ರದೇಶದ ಜನರು) ಏಷ್ಯನರಾಗಿರುವುದರಿಂದಾಗಿ ಈ ಪ್ರಯೋಗಗಳನ್ನು ನಡೆಸಲಾಗುತ್ತಿದೆಯೆ?" ಎಂದು ಅಮೆರಿಕದ ಪ್ರತಿನಿಧಿಯನ್ನು ಪ್ರಶ್ನಿಸಿದರು.

ಇದೇ ಬಗೆಯ ಇನ್ನೊಂದು ನಿರ್ಣಯವನ್ನು ಸೋವಿಯತ್ ಯೂನಿಯನ್ ಸಹ ಮಂಡಿಸಿದ್ದು, ಟ್ರಸ್ಟ್ ಪ್ರದೇಶಗಳಲ್ಲಿ ಪ್ರಯೋಗವನ್ನು ನಿಲ್ಲಿಸಬೇಕೆಂದು ಸೂಚಿಸಿದ್ದಿತು.

ಭಾರತದ ನಿರ್ಣಯವನ್ನು ಓಟಿಗೆ ಹಾಕಿದಾಗ ನಾಲ್ಕು ಮತ್ತು ಏಳು ಮತಗಳಿಂದ ಬಿದ್ದು ಹೋಯಿತು.

ಲೆಬನಾನ್ ಬಿಕ್ಕಟ್ಟು ಆಂತರಿಕ

ಲೆಬನಾನಿನಲ್ಲಿ ಇಂದು ಏರ್ಪಟ್ಟಿರುವ ಬಿಕ್ಕಟ್ಟು ಅದು ಆಂತರಿಕ ಪ್ರಶ್ನೆಯೆಂದು, ಲೆಬನಾನಿಗೆ ಭೇಟಿ ಇತ್ತಿದ್ದ ವಿಶ್ವಸಂಸ್ಥೆಯ ಮಹಾ ಕಾಯದರ್ಶಿ ಡಾಗ್ ಹ್ಯಾಮರ್ ಷೀಲ್ಡ್ ರವರು ಘೋಷಿಸಿದ್ದಾರೆ.

ವಿಶ್ವ ಸಂಸ್ಥೆಯ ಪೋಲೀಸು ಪಡೆಯನ್ನು ಸರಕಾರಕ್ಕೆ ಬೆಂಬಲವಾಗಿ ಕಳಿಸಿಕೊಡುವ ಪ್ರಶ್ನೆ ಇಲ್ಲವೆಂದೂ, ಈಜಿಪ್ಟ್—ಸಿರಿಯಾಗಳಿಂದ ದಂಗೆಕೋರರಿಗೆ ನೆರವೀಯಲು ಸ್ವಯಂಸೇವಕರು ಬಂದಿರುವರೆಂಬ ಆರೋಪವನ್ನು ತನಿಖೆ ಮಾಡಬೇಕೆಂದೂ ತಿಳಿಸಿದ್ದಾರೆ.

ಲೆಬನಾನಿನ ಅಧ್ಯಕ್ಷ ಚಮೋನ್‌ರವರು ಡಾಗ್ ಹ್ಯಾಮರ್ ಷೀಲ್ಡ್‌ರ ಅಭಿಪ್ರಾಯದ ಬಗ್ಗೆ ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅಮೇರಿಕ ಬ್ರಿಟನ್‌ಗಳ ನೆರವನ್ನು ಅಪೇಕ್ಷಿಸುತ್ತಿದ್ದಾರೆ.

ಕ್ರಾಂತಿಕಾರೀ ಪಡೆಗಳು ತಮ್ಮ ಹೋರಾಟವನ್ನು ಮುಂದುವರಿಸುತ್ತಿವೆ. ರಾಜಧಾನಿ ಬೀರಟ್‌ನಲ್ಲಿ ತೀವ್ರವಾದ ಯುದ್ಧ ನಡೆಯುತ್ತಿದೆ. ಅಮೆರಿಕದ ಆರನೆಯ ನೌಕಾ ದಳವು ಮೆಡಿಟರೇನಿಯನ್ ಸಮುದ್ರದಲ್ಲಿ ಗಸ್ತು ತಿರುಗುತ್ತಿದ್ದು, ಯಾವ ಸಂದರ್ಭದಲ್ಲಾದರೂ ಲೆಬನಾನಿನಲ್ಲಿ ಪ್ರವೇಶಿಸುವ ನಿರೀಕ್ಷೆಯಿದೆ. ಬ್ರಿಟನ್ ಸಹ ತನ್ನ ನೌಕಾ ಪಡೆಯನ್ನು ಮೆಡಿಟರೇನಿಯನ್‌ಗೆ ಕಳಿಸಿಕೊಟ್ಟಿದೆ. ಸೋವಿಯತ್ ಯೂನಿಯನ್ ಪಶ್ಚಿಮ ರಾಷ್ಟ್ರಗಳು ಲೆಬನಾನಿನ ಬಿಕ್ಕಟ್ಟಿನಲ್ಲಿ ಮಧ್ಯೆ ಪ್ರವೇಶಿಸುವುದನ್ನು ವಿರೋಧಿಸಿ ಎಚ್ಚರಿಕೆ ಇತ್ತಿದೆ.

1—7—'58

ಸಂಪಾದಕರಿಗೆ ಪತ್ರಗಳು

(ಆನೇ ಪುಟದಿಂದ)

ಭರವಸೆಯಿಂದ ಇಲ್ಲಿಯ ಪಾಗಾರ ರೈತರು, ಭೂಮಾಲಿಕರ ದಬ್ಬಾಳಿಕೆಯನ್ನು ತಡೆಯಲು ತಾಸಿಲ್‌ದಾರರಿಗೆ ಪುಕಾರಿತ್ತರೆ, ಬೇಲಿಯೇ ಹೊಲ ಮೇಯಲು ಬಯಸಿದಂತೆ ತಾಸಿಲ್‌ದಾರರು ರೈತರನ್ನೇ ತನ್ನ ಆ ಯುದ್ಧಕ್ಕೆ ಆಹುತಿ ತೆಗೆದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ತೋಳನಿಗೆ ಕುರಿಗಳ ನ್ಯಾಯ ತೀರ್ಮಾನದ ಅಧಿಕಾರ ಸಿಕ್ಕಿದಂತಾಗಿದೆ.

ಪುಕಾರು ಕೊಟ್ಟ ರೈತರಿಗೆ ಹೀನಾಯವಾಗಿ ಬಯ್ಯುತ್ತಿದ್ದಾರೆ. ಪುಕಾರನ್ನು ವಿಚಾರಿಸುವ ಸಮಯದಲ್ಲಿ, ಭೂಮಾಲಿಕರನ್ನು ಪಕ್ಕದಲ್ಲಿ ಕೂರಿಸಿಕೊಂಡು, ಪಾಗಾರರಿಗೆ ಈ ರೀತಿಯಲ್ಲಿ ಬೈಯ್ಯುತ್ತಿದ್ದಾರಂತೆ: "ಏನೋ, ಭೂಮಿಯನ್ನು ಬಿಟ್ಟು ಹೋಗಲು ಸಾಧ್ಯವಿಲ್ಲವೆಂದು ಹಟಹಿಡಿದಿದ್ದಿ? ನಿಮ್ಮಪ್ಪನ ಆಸ್ತಿಯೇನೋ? ಇವರಾಗಿ ನಿನ್ನನ್ನು ಒದ್ದು ಹೊರದೂಡದೆ ಬಿಟ್ಟದಾರೆ, ನಾನಾಗಿದ್ದರೆ ನಿನ್ನನ್ನು ಒದ್ದು ಹೊರದೂಡುತ್ತಿದ್ದೆ. ನೀನು ಬರೀ ಸುಳ್ಳು ಹೇಳುತ್ತಿ. ನೋಡು, ಇವರು ಹೇಳುವುದು ನಿಜವಾದದ್ದು. ಇವರು ದೊಡ್ಡ ಶ್ರೀಮಂತರು, ಇವರು ನಿನ್ನ ಮೇಲೆ ಸುಳ್ಳು ಹೇಳುತ್ತಾರೆನೊ?"

ಈ ತಾಸಿಲ್‌ದಾರರು ಹಿಂದೆ ಯುದ್ಧ ಕಾಲದ ಬ್ಲ್ಯಾಕ್ ಮಾರ್ಕೆಟ್ ಸಮಯದಲ್ಲಿ ಕಂಟ್ರೋಲ್ ಇನ್ಸ್‌ಪೆಕ್ಟರ್ ಆಗಿದ್ದು, ದೊಡ್ಡ ವ್ಯಾಪಾರಸ್ಥರ ಮತ್ತು ಶ್ರೀಮಂತ ಭೂಮಾಲಿಕರ ಪ್ರೀತಿಗೆ ಪಾತ್ರರಾಗಿ ರುಚಿ ಕಂಡಿರುತ್ತಾರೆ. ಈಗಲೂ ತಾಸಿಲ್‌ದಾರರಾಗಿ ಶ್ರೀಮಂತ ಭೂಮಾಲಿಕರ ಪ್ರೀತಿಯನ್ನು ಪಡೆಯುವುದರಲ್ಲಿ ಇದ್ದಾರೆ. ಹೀಗಿರುವಲ್ಲಿ ರೈತರ ಪುಕಾರುಗಳು ಯಾವ ರೀತಿಯಲ್ಲಿ ತೀರ್ಮಾನವಾಗಬಹುದು?

ಯುದ್ಧ ಕಾಲದ ಬ್ಲ್ಯಾಕ್ ಮಾರ್ಕೆಟ್ ಸಮಯದಲ್ಲಿ ಶ್ರೀಮಂತರ ಪ್ರೀತಿಗೆ ಒಳಗಾಗಿ ಸುಖಪಟ್ಟದ್ದು ಬ್ರಿಟಿಷ್ ರಾಜ್ಯಭಾರದಲ್ಲಿ. ಈಗ ಪ್ರಜಾ ಸರ್ಕಾರ. ರಾಜಮಹಾರಾಜರುಗಳು ಸಿಂಹಾಸನವನ್ನೇ ಕಳಕೊಂಡಿರುತ್ತಾರೆ. ಅಂಥ ದರ್ಬಾರ್ ನಡೆಸುವ ಮಂತ್ರಿಗಳೇ ಉರುಳುತ್ತಿದ್ದಾರೆ. ಹೊಟ್ಟೆಗೆ ಹಿಟ್ಟೊದಗಿಸುವ, ದುಡಿವ ರೈತನ ಮೇಲೆ ದಬ್ಬಾಳಿಕೆಯೇ? ರೈತ ಆರ್ಡಿನೆನ್ಸು, ರೈತರನ್ನೇ ಸದೆಬಡಿಯುವ ಗದೆಯೇ?

ಇವರ ಈ ಕೃತ್ಯವನ್ನು ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಸರಿಪಡಿಸಬೇಕಾಗಿದೆ.

"ನೊಂದ ರೈತ"

ಕನ್ನಡಿಗರಿಗಾಗಿರುವ ಅನ್ಯಾಯಕ್ಕೆ ಸರಕಾರ ಹೊಣೆ

(ಮೊದಲನೇ ಪುಟದಿಂದ)

ಕಮ್ಯೂನಿಸ್ಟ್ ಪಾರ್ಟಿಯಂತೂ ಈ ಅಭಿಪ್ರಾಯವನ್ನೇ ಮೊದಲಿನಿಂದಲೂ ಹೇಳಿರುತ್ತದೆ. ಜನವರಿಯಲ್ಲಿ ನಡೆದ ಕರ್ನಾಟಕ ಪ್ರಾಂತ ಸಮ್ಮೇಳನವೂ ಯೋಜನೆಯನ್ನು ಕಾರ್ಯಗತಗೊಳಿಸುವ ಸಲುವಾಗಿ ಎಲ್ಲ ಪಕ್ಷಗಳ ಸಹಕಾರವನ್ನು ಕಾಂಗ್ರೆಸ್ ತೆಗೆದುಕೊಳ್ಳಬೇಕೆಂದು ಹೇಳಿದೆ.

ಬಡಜನತೆಯ ಮೇಲಿನ ತೆರಿಗೆಯ ಹೊರೆ ಇಳಿಸುವಾಗಲಿ ರಾಜ್ಯದ ಅಂತರಿಕ ಸಾಧನಸಂಪತ್ತನ್ನು ಆದಷ್ಟು ಹೆಚ್ಚು ಯೋಜನೆಯ ಬಗ್ಗೆ ಪಡೆಯುವ ದೃಷ್ಟಿಯಿಂದ ತೆರಿಗೆ ಧೋರಣೆ ಮೈಸೂರು ಸರಕಾರಕ್ಕಿಲ್ಲ. ಹಣದ ದುರ್ವ್ಯಯವನ್ನು ತಡೆಯಲಾಗುತ್ತಿಲ್ಲ. ಆಡಳಿತೆಯ ಶಿಥಿಲತೆಯಿಂದಾಗಿ ವ್ಯಯವಾಗುವ ಹಣಕ್ಕೆ ತಕ್ಕದಾದ ಫಲವೂ ದೊರಕುತ್ತಿಲ್ಲ. ಈ ಕೊರತೆಗಳನ್ನು ನಿವಾರಿಸಬೇಕೆಂದು ಕಮ್ಯೂನಿಸ್ಟ್ ಪಾರ್ಟಿ ಒತ್ತಾಯಿಸಿದೆ.

ಕಮ್ಯೂನಿಸ್ಟ್ ಪಾರ್ಟಿಯು ಯೋಜನೆಗೆ ವಿರೋಧವಿಲ್ಲ ಮಾತ್ರವಲ್ಲ ಯೋಜನೆಯನ್ನು ಸಂಪೂರ್ಣ ಯಶಸ್ವಿಗೊಳಿಸುವುದರಲ್ಲಿ ತೀವ್ರ ಆಸಕ್ತಿಯನ್ನು ಹೊಂದಿದೆ. ಅದರ ಸಲುವಾಗಿ ಶಕ್ತಿಮೀರಿ ದುಡಿಯುತ್ತಲೂ ಇದೆ. ಆದರೆ ಖಜಾನೆಯ ಬೀಗದ ಕೈ ಹಾಗೂ ಯೋಜನೆಯ ಸೂತ್ರಗಳು ಸರಕಾರದ ಕೈಯಲ್ಲಿರುವುದರಿಂದ, ಆಡಳಿತ ಪಕ್ಷವಾದ ಕಾಂಗ್ರೆಸ್ಸು ಅದರ ಸಂಕುಚಿತ ಮತ್ತು ಪ್ರತಿಗಾಮಿ ನೀತಿಯನ್ನು ಬಿಟ್ಟು ಎಲ್ಲ ಪಕ್ಷಗಳ ಮತ್ತು ಜನತೆಯ ಸಂಪೂರ್ಣ ಸಹಕಾರವನ್ನು ಪಡೆಯಬಲ್ಲ ನೀತಿಯನ್ನು ಅನುಸರಿಸಬೇಕು. ಅದಾಗದೆ ಇಂದಿನ ಗಂಭೀರ ಪರಿಸ್ಥಿತಿಯಿಂದ ಪಾರಾಗಲು ಸಾಧ್ಯವಾಗದು. ಕಮ್ಯೂನಿಸ್ಟ್ ಪಾರ್ಟಿಯು ಎಲ್ಲ ಪಕ್ಷಗಳೊಳಗಿನ ಮತ್ತು ಯಾವ ಪಕ್ಷದಲ್ಲೂ ಇಲ್ಲದ ಎಲ್ಲ ಪ್ರಜಾಪ್ರಭುತ್ವವಾದಿಗಳನ್ನೂ, ರಾಜ್ಯಾಭಿವೃದ್ಧಿಯಲ್ಲಿ ಆಸಕ್ತಿ ಇರುವವರನ್ನೂ ಈ ಗಂಭೀರ ಪರಿಸ್ಥಿತಿಯ ಬಗ್ಗೆ ಜಾಗೃತಗೊಳಿಸಿ ಒಂದುಗೂಡಿಸಲು ಪ್ರಯತ್ನಿಸುತ್ತದೆ.

ಇಮ್ರೆ ನಾಜ್ ಮತ್ತವನ ಪಿತೂರಿ ಕೂಟ !

(೬ನೇ ಪುಟದಿಂದ)

ಕೆಲವು ಪ್ರತಿಗಾಮಿಗಳನ್ನು, ಬಂಡಾಯದ ನಾಯಕರನ್ನು, ಸೇರಿಸಿಕೊಳ್ಳಲಾಯಿತು. ಬಂಡಾಯದ ಸಶಸ್ತ್ರಪಡೆಗಳ ನಾಯಕ ಪಾಲ್‌ಮೆಲೆಟರ್ "ರಕ್ಷಣಾ ಮಂತ್ರಿ" ಯಾಗಿ ನೇಮಕ ಹೊಂದಿದ.

ಹೀಗೆ ಜನತಾ ಪ್ರಜಾಪ್ರಭುತ್ವದ ಕೇಂದ್ರ ಘಟಕಗಳನ್ನು ಮುರಿದ ಬಳಿಕ ನಾಜ್ ಪ್ರಾದೇಶಿಕ ಸರಕಾರೀ ಘಟಕಗಳನ್ನು ರದ್ದುಮಾಡತೊಡಗಿದ. ಪ್ರಾದೇಶಿಕ ಕೌನ್ಸಿಲುಗಳು, ಆರ್ಥಿಕ ಆಡಳಿತೆಯ ಘಟಕಗಳೇ ಮೊದಲಾದುವುಗಳನ್ನು ಬರಖಾಸ್ತು ಮಾಡಿ, ಅವುಗಳ ಬದಲು "ಕ್ರಾಂತಿಕಾರಿ ಸಮಿತಿಗಳು" ಎಂಬ ಬಂಡುಗಾರರ ಸಂಘಟನೆಗಳ ಕೈಗೆ ಆಡಳಿತೆಯನ್ನು ಒಪ್ಪಿಸಿದ. ಕ್ರಾಂತಿ ವಿರೋಧಿಗಳಿಗೆ ಆಯುಧಗಳನ್ನು ಒದಗಿಸಿದ. ಜೈಲುಗಳಿಂದ ಬಿಡುಗಡೆ ಹೊಂದಿದ ಅಪರಾಧಗಳಿಂದ ಬಿಡುಗಡೆ ಹೊಂದಿದ ಅಪರಾಧಿಗಳು, ಯುದ್ಧದ ಅಪರಾಧಿಗಳು, ರಾಷ್ಟ್ರ ಘಾತುಕರೇ ಮೊದಲಾದವರನ್ನು ಸೇರಿಸಿ "ರಾಷ್ಟ್ರೀಯ ರಕ್ಷಕ ದಳ"ವನ್ನು ಸಂಘಟಿಸಿದ.

ಅಮಾನುಷ ಮರ್ದನ

ಅನಂತರ ಬುಡಾಪೆಸ್ಟ್‌ನಲ್ಲೂ ದೇಶದ ಆದ್ಯಂತವಾಗಿಯೂ ಅಮಾನುಷ ಮರ್ದನ ನಡೆಸಲ್ಪಟ್ಟಿತು. ಇಮ್ರೆ ನಾಜ್ ಮತ್ತವನ ಸಂಗಡಿಗರ ಆಳ್ವಿಕೆಯ ಕೆಲವೇ ದಿನಗಳೊಳಗೆ 234 ನಿರಪರಾಧಿ ಜನರನ್ನು ಮೃಗೀಯವಾಗಿ ಕೊಲೆ ಮಾಡಲಾಗಿದೆ. ಜನತಾ ಪ್ರಜಾಪ್ರಭುತ್ವದಲ್ಲಿ ನಿಷ್ಠೆಯಿರುವ 3,000 ನಾಗರಿಕರನ್ನು ಕಾರಾಗ್ರಹದಲ್ಲಿ ಇಡಲಾಗಿತ್ತು; ಅವರನ್ನು ಕೊಲ್ಲುವ ಯೋಜನೆಯೂ ತಯಾರಾಗಿತ್ತು. 10,000ಕ್ಕಿಂತ ಹೆಚ್ಚು ಜನರನ್ನು ನಿರ್ಮೂಲನ ಮಾಡುವ ಯೋಜನೆ ಸಿದ್ಧವಾಗಿತ್ತು.

ಇಮ್ರೆ ನಾಜ್ ಮತ್ತವನ ಸಂಗಡಿಗರು ಪಶ್ಚಿಮ ಜರ್ಮನಿಯ ಮತ್ತು ಅಮೇರಿಕದ ಸಾಮ್ರಾಜ್ಯಶಾಹಿಗಳೊಂದಿಗೆ ಸಂಪರ್ಕ ಏರ್ಪಡಿಸಿಕೊಂಡಿದ್ದರು

ವಾರ್ಸಾ ಒಪ್ಪಂದವನ್ನು ಮುರಿದು, ಹಂಗೇರಿಯನ್ನು ಸಾಮ್ರಾಜ್ಯಶಾಹಿಗಳ ಕೈಗೆ ಒಪ್ಪಿಸುವ ಒಳಸಂಚನ್ನು ಕೂಡಾ ಇಮ್ರೆ ನಾಜ್ ಮತ್ತವನ ಸಂಗಡಿಗರು ನಡೆಸಿದ್ದರು. ಜನತಾ ಪ್ರಜಾಪ್ರಭುತ್ವದ ಸಶಸ್ತ್ರ ಸೇನೆಯ ವಿರೋಧವಾಗಿಯೂ, ಅದರ ಸಹಾಯಕ್ಕೆ ಸರಕಾರದ ಆಮಂತ್ರಣದಂತೆ ಬಂದಿದ್ದ ಸೋವಿಯತ್ ಸೇನೆಗಳ ವಿರೋಧವಾಗಿಯೂ ಅಮೇರಿಕೆ ಸಶಸ್ತ್ರ ಸೈನ್ಯ ಪ್ರವೇಶಿಸುವಂತೆ ಇಮ್ರೆ ನಾಜ್ ಮತ್ತವನ ಸಂಗಡಿಗರು ತಂತ್ರ ಹೂಡಿದ್ದರು.

ಬಂಡಾಯವು ವಿಫಲವಾದ ಬಳಿಕ ಇಮ್ರೆ ನಾಜ್ ಮತ್ತು ಅವನಂಥ ಇತರ ಕೆಲವು ಬಂಡಾಯಗಾರರು ಹೊರದೇಶಗಳಲ್ಲಿ ರಕ್ಷಣೆ ಹೊಂದಲು ಯತ್ನಿಸತೊಡಗಿದರು. ಕಾರ್ಡಿನಲ್ ಮಿಂಡ್ಸೆಂಟಿಗೆ ಅಮೇರಿಕದ ರಾಯಭಾರಿ ಕಛೇರಿಯಲ್ಲಿ ಆಶ್ರಯ ದೊರಕಿತು. ಇಸ್ಟ್‌ವಾನ್ ಬಿ. ಸಾಬೊ ಬ್ರಿಟಿಷ್ ರಾಯಭಾರಿ ನಿಲಯದಲ್ಲಿ ಆಶ್ರಯ ಹೊಂದಿದ. ಇಮ್ರೆ ನಾಜ್ ಮತ್ತಿತರ ಕೆಲವರಿಗೆ ಬುಡಾಪೆಸ್ಟಿನ ಯುಗೋಸ್ಲಾವಿಯಾ ರಾಯಭಾರಿ ಕಛೇರಿಯಲ್ಲಿ ಆಶ್ರಯ ದೊರಕಿತು.

ಕಾರ್ಮಿಕರ ಮತ್ತು ರೈತರ ಕ್ರಾಂತಿಕಾರೀ ಸರಕಾರವು ಹಂಗೇರಿಯಲ್ಲಿ ನೆಮ್ಮದಿಯನ್ನು ಸ್ಥಾಪಿಸುವುದಕ್ಕೂ ಬಂಡಾಯದಿಂದಾದ ಹಾನಿಯನ್ನು ನಿವಾರಿಸುವುದಕ್ಕೂ ಪ್ರಯತ್ನಿಸುತ್ತಿದ್ದಾಗ, ಬಂಡಾಯಗಾರರ ಗುಂಪುಗಳು ಅವರ ನೀಚ ಕೃತ್ಯಗಳನ್ನು ಮುಂದುವರಿಸುತ್ತಲೇ ಇದ್ದುವು. ಯುಗೋಸ್ಲಾವಿಯಾ ರಾಯಭಾರಿ ಕಛೇರಿಯಲ್ಲಿ ಆಶ್ರಯ ಪಡೆದಿದ್ದ ನಾಜ್ ಮತ್ತಿತರರು ಈ ದಂಗೆಖೋರ ಪ್ರತಿಗಾಮಿಗಳೊಂದಿಗೆ ಸಂಪರ್ಕ ಬೆಳೆಸಲು ಯತ್ನಿಸಿದರು.

ಈ ಬಂಡಾಯಗಾರರ ವಿಚಾರಣೆಯಲ್ಲಿ ದೊರಕಿರುವ ಎಲ್ಲ ಪುರಾವೆಗಳನ್ನೂ ಕೂಲಂಕುಶವಾಗಿ ಪರಿಶೀಲಿಸಿ, ನ್ಯಾಯಾಲಯವು ಇಮ್ರೆ ನಾಜ್ ಮತ್ತವನ ಸಂಗಡಿಗರಿಗೆ ಯೋಗ್ಯ ದಂಡನೆ ವಿಧಿಸಿದೆ.

ತಿದ್ದುಪಡಿ : ಆಗಸ್ಟ್‌ನಲ್ಲಿ ಹೊರಡಲಿರುವ "ಜನಯುಗ" ಪತ್ರಿಕೆಯ ಜಾಹೀರಾತಿನಲ್ಲಿ (ಕಳೆದ ಸಂಚಿಕೆಯಲ್ಲಿ) ೧೨ ನಯಾ ಪೈಸಾ ಇದ್ದುದನ್ನು ೨೫ ನ. ಪೈ. ಅಂತ ತಿಳಿಯತಕ್ಕದ್ದು.

REG. No. M 6867

Edited Printed and Published by C. R. Krishna Rao, at Janashakthi Printers
L—59, K. V. Temple St., Sultanpet Bangalore—2 phone: 3810